ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಗಡುವು ಮೀರಿದ್ದಲ್ಲಿ ಇಂದು ರಾತ್ರಿಯೇ ಇರಾನ್ ಸರ್ವನಾಶವಾಗಲಿದೆ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಒಡ್ಡಿದ ಬೆನ್ನಲ್ಲೇ ಇರಾನ್‌ನಲ್ಲಿರುವ ಭಾರತೀಯರಿಗೆ ಮುಂದಿನ 48 ತಾಸು ಇದ್ದಲ್ಲೇ ಇರುವಂತೆ ತುರ್ತು ಸೂಚನೆ ನೀಡಲಾಗಿದೆ.

08 ಏಪ್ರಿಲ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 29 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬದುಕಿನಲ್ಲಿ ಅಂಕಿ ಸಂಖ್ಯೆಗಳದ್ದೆ ಸಾಮ್ರಾಜ್ಯ ! » 2



ತಂತ್ರಜ್ಞಾನವನ್ನು ಕಲಾತ್ಮಕವಾಗಿ ದುಡಿಸಿಕೊಳ್ಳಿ » 3



ರಾಜ್ಯದ 8 ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ » 4

# ಪಂಚ ರಾಜ್ಯ ಚುನಾವಣೆ ಬಳಿಕ ಎಸ್‌ಐಆರ್

## ಚುನಾವಣಾ ಆಯೋಗ ಸಿದ್ಧತೆ | ಎ.9ಕ್ಕೆ ಮೊದಲ ಹಂತದ ಮತದಾನ

• ಪ್ರಜೋದಯ ವರದಿ

**ನವದೆಹಲಿ :** ಪಂಚ ರಾಜ್ಯ ಚುನಾವಣೆಯ ನಂತರ ಚುನಾವಣಾ ಆಯೋಗವು ಮೂರನೇ ಹಾಗು ಅಂತಿಮ ಸುತ್ತಿನ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲಿದೆ.

ಕೇರಳ, ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ ಹಾಗು ಪುದುಚೇರಿಯಲ್ಲಿ ಈ ತಿಂಗಳು ಮತ ದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ಎ.29 ರಂದು ಪಂಚರಾಜ್ಯ ಚುನಾವಣೆಗಳ ಮತದಾನ ಪೂರ್ಣಗೊಂಡ ನಂತರ ಅಥವಾ ಫಲಿತಾಂಶದ ನಂತರ ಎಸ್‌ಐಆರ್ ಆರಂಭವಾಗಲಿದೆ. ಇದು ವರೆಗೂ 10 ರಾಜ್ಯಗಳು ಹಾಗು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕರ್ನಾಟಕ, ಆಂಧ್ರಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ಮಣಿಪುರ, ದೆಹಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಸೇರಿ 17 ರಾಜ್ಯ ಹಾಗು 5 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಯಲಿದೆ. ದೇಶದಲ್ಲಿ ಒಟ್ಟು 99 ಕೋಟಿ ಮತದಾರರಿದ್ದು, 39 ಕೋಟಿ ಜನರು ಈ ಬಾರಿಯ ಎಸ್‌ಐಆರ್‌ನಲ್ಲಿ ಒಳಗೊಳ್ಳಲಿದ್ದಾರೆಂದು ಹೇಳಿದ್ದಾರೆ. ತಮಿಳುನಾಡು ಹಾಗು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್‌ಗೆ ಬಾರಿ ವಿರೋಧ ವ್ಯಕ್ತವಾಗಿತ್ತು. ಈ ಕುರಿತು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರತಿಭಟನೆ ನಡೆಸಿದ್ದರು.

### ಮತಗಟ್ಟೆ ಸಮೀಕ್ಷೆ ಪ್ರಸಾರ ನಿಷೇಧ

ಈ ತಿಂಗಳು ನಡೆಯುವ ಐದು ರಾಜ್ಯಗಳ ಚುನಾವಣೆ ಹಿನ್ನಲೆಯಲ್ಲಿ ಏ. 9ರ ಬೆಳಿಗ್ಗೆ 7ಗಂಟೆಯಿಂದ 29ರ ಸಂಜೆ 6.30ರ ವರೆಗೆ ಮತಗಟ್ಟೆ ಸಮೀಕ್ಷೆಗಳನ್ನು ನಡೆಸುವಂತಿಲ್ಲ, ಪ್ರಸಾರ ಮಾಡುವಂತಿಲ್ಲವೆಂದು ಚುನಾ ವಣಾ ಆಯೋಗ ತಿಳಿಸಿದೆ. ಈ ಅವಧಿಯಲ್ಲಿ ಮತಗಟ್ಟೆ ಸಮೀಕ್ಷೆಗಳನ್ನು ನಡೆಸಿ, ಪ್ರಸಾರ ಮಾಡುವುದು 1951ರ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 126ಎ ಉಲ್ಲಂಘನೆ ಎಂದು ಎಚ್ಚರಿಸಿರುವ ಆಯೋಗ, ದಂಡ ಹಾಗು ಎರಡು ವರ್ಷಗಳ ಜೈಲು ಶಿಕ್ಷೆ ಎದುರಿಸಬೇಕಾದ ಪ್ರಕರಣ ಎಂದಿದೆ.

ಒಟ್ಟು 824 ಕ್ಷೇತ್ರಗಳಲ್ಲಿ ಮತದಾನ ಕೇರಳ, ಪುದುಚೇರಿ ಮತ್ತು ಅಸ್ಸಾಂನಲ್ಲಿ ಏ. 9ರಂದು ಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದಲ್ಲಿ ಏ. 23 ಮತ್ತು 29ರಂದು ಎರಡು ಹಂತ, ತಮಿಳುನಾಡಿನಲ್ಲಿ ಏ. 23ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಎಲ್ಲಾ ಚುನಾವಣೆಗಳ ಫಲಿತಾಂಶ ಮೇ 4ರಂದು ಹೊರ ಬೀಳಲಿದೆ. ಐದು ರಾಜ್ಯಗಳ ಚುನಾವಣೆಯು ಕೇವಲ ಆಯಾ ರಾಜ್ಯಗಳಿಗೆ ಮಾತ್ರ ಸೀಮಿತವಾಗಿರದೆ ಇಡೀ ದೇಶದ ರಾಜಕೀಯ ದಿಕ್ಕನ್ನೇ ಬದಲಿಸುವ ಸಾಮರ್ಥ್ಯ ಹೊಂದಿದೆ. ಐದು ರಾಜ್ಯಗಳಿಂದ ಒಟ್ಟು 824 ಕ್ಷೇತ್ರಗಳಿವೆ. ಒಟ್ಟು 17.4 ಕೋಟಿ ಮತದಾರರಿದ್ದು, ಪಶ್ಚಿಮ ಬಂಗಾಳದಲ್ಲಿ 6.44 ಕೋಟಿ, ತಮಿಳುನಾಡಿನಲ್ಲಿ 5.67 ಕೋಟಿ, ಕೇರಳದಲ್ಲಿ 2.70 ಕೋಟಿ, ಅಸ್ಸಾಂನಲ್ಲಿ 2.50 ಕೋಟಿ ಹಾಗು ಪುದುಚೇರಿಯಲ್ಲಿ 9.44 ಲಕ್ಷ ಮತದಾರರಿದ್ದಾರೆ.

### ರಾಜ್ಯದಲ್ಲೂ ಬಹಿರಂಗ ಪ್ರಚಾರಕ್ಕೆ ತೆರೆ

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಕ್ಕೆ ಏ. 9ರಂದು ಉಪಚುನಾವಣೆ ನಡೆಯಲಿದ್ದು, ಮಂಗಳವಾರ ಬಹಿರಂಗ ಪ್ರಚಾರಕ್ಕೆ ತೆರೆ ಎಳೆಯಲಾಯಿತು.

ಕಾಂಗ್ರೆಸ್ ನಾಯಕರಾದ ಶಾಮನೂರು ಶಿವಶಂಕರಪ್ಪ ಮತ್ತು ಹೆಚ್.ವೈ.ಮೇಟಿ ನಿಧನ ಹಿನ್ನಲೆ ತೆರವಾದ ಸ್ಥಾನಕ್ಕೆ ಮತದಾನ ನಿಗದಿಯಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಮರ್ಥ್ ಶಾಮನೂರು, ಬಿಜೆಪಿಯಿಂದ ಶ್ರೀನಿವಾಸ ದಾಸಕರಿಯಪ್ಪ, ಬಾಗಲಕೋಟೆಯಲ್ಲಿ ಕಾಂಗ್ರೆಸ್‌ನಿಂದ ಉಮೇಶ್ ಮೇಟಿ ಹಾಗು ಬಿಜೆಪಿ ಅಭ್ಯರ್ಥಿಯಾಗಿ ವೀರಣ್ಣ ಚರಂತಿಮಠ ಸ್ಪರ್ಧೆ ಬಯಸಿದ್ದಾರೆ.

ಎರಡೂ ಕ್ಷೇತ್ರಗಳನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ಗೆಲುವು ಸಾಧಿಸುವ ಉಮೇದಿನಲ್ಲಿದೆ. ಅದೇ ರೀತಿ ಬಿಜೆಪಿ ಕೂಡ ಆಯಾ ಕ್ಷೇತ್ರದಲ್ಲಿರುವ ಆಡಳಿತ ವಿರೋಧಿ ಅಲೆಯ ಲಾಭ ಪಡೆಯಲು ಕಸರತ್ತು ನಡೆಸಿದೆ. ಈ ಉಪಚುನಾವಣೆ ಮುಂದಿನ ಚುನಾವಣೆ ದಿಕ್ಸೂಚಿ ಎಂದೇ ವ್ಯಾಖ್ಯಾನಿಸಲಾಗುತ್ತಿದ್ದು ಎಲ್ಲರ ದೃಷ್ಟಿ ಚುನಾವಣೆಯತ್ತ ನೆಟ್ಟಿದೆ.

# ಬಾಲಕಿಯರಿಗೆ ಸ್ವಯಂ ರಕ್ಷಣೆ ಅರಿವು ಅವಶ್ಯ




• ಪ್ರಜೋದಯ ವರದಿ

**ಹಾಸನ:** ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿಯೇ ಸ್ವಯಂ ರಕ್ಷಣೆ ವಿಧಾನ ಹಾಗು ಕಾನೂನಿನ ಅರಿವು ಮೂಡಿಸಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಮಂಗಳವಾರ ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಏರ್ಪಡಿಸಿದ್ದ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಅವುಗಳ ನಿಯಂತ್ರಣಕ್ಕೆ ಬಾಲ್ಯದಿಂದಲೇ ಶಿಕ್ಷಣ ನೀಡುವುದು ಅಗತ್ಯವಾಗಿದೆ ಎಂದರು.

ಮಹಿಳೆಯರು ಇಂತಹ ಪ್ರಕರಣಗಳು ಎದುರಾದಾಗ ಸ್ಥಳದಲ್ಲೇ ಖಂಡಿಸಿ ಅದರ ವಿರುದ್ಧ ನಿಲ್ಲಬೇಕು. ಹಾಗಾದರೆ ಮಾತ್ರ ದೌರ್ಜನ್ಯಗಳನ್ನು ನಿಯಂತ್ರಿಸಬಹುದಾಗಿದೆ. ಮಹಿಳಾ ದೌರ್ಜನ್ಯ ನಿಯಂತ್ರಣಕ್ಕೆ ಸರ್ಕಾರ ಹಲವು ಕಾನೂನು ಜಾರಿಗೆ ತಂದಿದ್ದು ಅದರ ಪ್ರಯೋಜನ ಪಡೆಯಬೇಕೆಂದು ಸಲಹೆ ನೀಡಿದರು.

ಮಹಿಳೆಯರು ಹೆಚ್ಚು ಶಿಕ್ಷಿತರಾದಷ್ಟು ದೌರ್ಜನ್ಯಗಳನ್ನು ನಿಯಂತ್ರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಮನೆಯ ಹಂತದಲ್ಲಿ ಮಕ್ಕಳಿಗೆ, ಸ್ತ್ರೀಯರಿಗೆ ಗೌರವ ಕೊಡುವ ಸಂಸ್ಕೃತಿಯನ್ನು ಬೆಳೆಸುವುದು ಅತ್ಯಗತ್ಯವಾಗಿದೆ. ಸ್ತ್ರೀಯರನ್ನು ಪೂಜಿಸುವ ಸಂಸ್ಕೃತಿ ನಮ್ಮದಾಗಿದೆ. ಈ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು. ಶಾಲಾ, ಕಾಲೇಜು ಹಂತದಲ್ಲಿ ತರಬೇತಿ ಕಾರ್ಯಾಗಾರ ನಡೆಸಬೇಕು. ಬಾಲಕಿಯರು ಉತ್ತಮ ವ್ಯಾಸಂಗದ ಮೂಲಕ ಒಳ್ಳೆಯ ಬದುಕು ಕಟ್ಟಿಕೊಳ್ಳಬೇಕು. ಆ ಮೂಲಕ ಹೆತ್ತ ತಂದೆ ತಾಯಿಗೆ ಹೆಸರು ತರಬೇಕು. ಮಹಿಳೆಯರು ಹಾಗು ಮಕ್ಕಳು ತಾವಿರುವ ಜಾಗದಲ್ಲಿ ಏನೇ ಸಮಸ್ಯೆಯಾದರೂ ತಕ್ಷಣವೇ ಸ್ಥಳೀಯ ಪೊಲೀಸರು ಹಾಗು ಸಹಾಯವಾಣಿ ಸಂಪರ್ಕಿಸಬೇಕೆಂದು ಕಿವಿಮಾತು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಧರಣಿ ಕುಮಾರ್, ತಹಶೀಲ್ದಾರ್ ಗೀತಾ ಇತರರಿದ್ದರು.

# ಕುದರಂಗಿ ವೀರಭದ್ರಸ್ವಾಮಿ ಅದ್ದೂರಿ ರಥೋತ್ಸವ

## ಸಾವಿರಾರು ಭಕ್ತರು ಭಾಗಿ : ವಿವಿಧ ಪೂಜಾ ಕೈಂಕರ್ಯ



### ಇಂದು ಪಲ್ಲಕ್ಕಿ ಉತ್ಸವ

ಬುಧವಾರ ಬೆಳಿಗ್ಗೆ 11 ಗಂಟೆಗೆ ಪಲ್ಲಕ್ಕಿ ಉತ್ಸವ ಹಾಗೂ ಮಧ್ಯಾಹ್ನ ಈಡುಗಾಯಿ ಸೇವೆ ನಡೆಯಲಿದೆ. ಏ.8 ರಂದು ರಾತ್ರಿ 9 ಗಂಟೆಗೆ ಅವಭೃತ ಸ್ನಾನದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ.

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಕುದರಂಗಿ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಪುಷ್ಪ ಹಾಗು ಬ್ರಹ್ಮ ರಥೋತ್ಸವ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು.

ವರ್ಷಕೊಮ್ಮೆ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಜಿಲ್ಲೆ ಮಾತ್ರವಲ್ಲದೇ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಜನರು ಭಾಗವಹಿಸಿದ್ದರು. ಸೋಮವಾರದಿಂದ ಆರಂಭವಾದ ಜಾತ್ರಾ ಮಹೋತ್ಸವದಲ್ಲಿ ಮೊದಲ ದಿನ ರುದ್ರಾಭಿಷೇಕ, ಹೋಮಹವನ, ರಥಗಳಿಗೆ ಕಳಶರೋಹಣ ನಡೆಯಿತು. ಮಂಗಳವಾರ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ಪೂಜಾ ವಿಧಿವಿಧಾನಗಳು ಆರಂಭಗೊಂಡು, ಮಹಾಮಂಗಳಾರತಿ, ಉತ್ಸವ ಮೂರ್ತಿಗಳಿಗೆ ವಿಶೇಷ ಅಲಂಕಾರ, ದೇವಸ್ಥಾನದ ಪ್ರದಕ್ಷಿಣೆ ಸೇರಿ ವಿವಿಧ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು.

9 ಗಂಟೆ ಸುಮಾರಿಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಭದ್ರಕಾಳಿ ದೇವಿಯ ಉತ್ಸವ ಮೂರ್ತಿಗಳನ್ನು ಪುಷ್ಪರಥದಲ್ಲಿ ಪ್ರತಿಷ್ಠಾಪಿಸಿ ಭಕ್ತರ ಜಯಘೋಷಗಳ ನಡುವೆ ರಥವನ್ನು ಎಳೆಯುವ ದೃಶ್ಯ ಮನಮೋಹಕವಾಗಿತ್ತು. ಬೆಳಿಗ್ಗೆ 11 ಗಂಟೆಗೆ ರಾಜ್ಯೋತ್ಸವ, ಕಲ್ಯಾಣ ಮಹೋತ್ಸವ, ಬಲಿ ಪೂಜೆ ನಡೆದ ಬಳಿಕ ಮಧ್ಯಾಹ್ನ 1 ಗಂಟೆಗೆ ನಡೆದ ಬ್ರಹ್ಮ ರಥೋತ್ಸವವು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, ಭಕ್ತರು ರಥದ ಎಳೆದು ಭಕ್ತಿಯನ್ನು ಸಮರ್ಪಿಸಿದರು. ಈ ವೇಳೆ ಜಯ ಘೋಷಗಳು ಮೊಳಗಿದರೆ, ಭಕ್ತರು ಬಾಳೆಹಣ್ಣುಗಳನ್ನು ರಥದ ಮೇಲೆ ಎಸೆದು ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸುವ ಹಿನ್ನಲೆಯಲ್ಲಿ ಕೆಎಸ್‌ಆರ್‌ಟಿಸಿಯಿಂದ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿತ್ತು. ಪೊಲೀಸ್ ಇಲಾಖೆ ಭದ್ರತಾ ವ್ಯವಸ್ಥೆ ಕೈಗೊಂಡಿತ್ತು. ವಾಹನ ಸಂಚಾರ ನಿಯಂತ್ರಣ, ಕುಡಿಯುವ ನೀರು ಸೇರಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು.

### ಅರೆಕೆರೆ ಮಂದೆಯಿಂದ ಸಾಮೂಹಿಕ ಆಚರಣೆ

ಕುದರಂಗಿ, ಸುಳ್ಳಕ್ಕಿ, ಅರೆಕೆರೆ, ಬ್ಯಾಕರವಳ್ಳಿ, ನಲ್ಲೂಲ್ಲಿ, ಕಾಮನಹಳ್ಳಿ, ನಡಹಳ್ಳಿ ಸೇರಿ ಸುತ್ತಮುತ್ತಲಿನ ಗ್ರಾಮಗಳ ಜನರು ಒಟ್ಟಾಗಿ ಈ ಜಾತ್ರೆಯನ್ನು ಆಚರಿಸುವುದು ಮತ್ತೊಂದು ವಿಶೇಷ. ದೇವಸ್ಥಾನ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟರೂ ಅಗತ್ಯ ಅನುದಾನ ಸಿಗದೆ ಇರುವುದರಿಂದ ದಾನಿಗಳ ನೆರವಿನಿಂದ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ.

### ಬೆತ್ತದಿಂದ ರಥ ಎಳೆಯುವ ಪರಂಪರೆ

ಈ ಜಾತ್ರೆಯಲ್ಲಿನ ಅತ್ಯಂತ ವಿಶಿಷ್ಟ ಸಂಪ್ರದಾಯವೆಂದರೆ ಪುಷ್ಪರಥ ಹಾಗೂ ಬ್ರಹ್ಮರಥವನ್ನು ಬೆತ್ತದಿಂದ ಎಳೆಯುವ ಪದ್ಧತಿ ಇಲ್ಲಿನ ವಿಶೇಷ. ಪಶ್ಚಿಮಘಟ್ಟದ ದಟ್ಟ ಅರಣ್ಯಗಳಲ್ಲಿ ಅಲೆದಾಡಿ ಉದ್ದನೆಯ ಬೆತ್ತವನ್ನು ಸಂಗ್ರಹಿಸಿ ತರುವ ಪದ್ಧತಿ ಇಂದಿಗೂ ಜೀವಂತವಾಗಿದೆ. ಕಾಮನಹಳ್ಳಿ ಗ್ರಾಮಸ್ಥರು ಪ್ರತಿಬಾರಿ ಜಾತ್ರೆಗೆ ಬೆತ್ತವನ್ನು ತರುವ ಜವಾಬ್ದಾರಿಯನ್ನು ಭಕ್ತಿಯಿಂದ ನಿರ್ವಹಿಸುತ್ತಾರೆ.

# ಬಾಣಂತಿಯರ ಕೊಠಡಿಯಲ್ಲಿ ಕಂದಮ್ಮಗಳ ಸುರಕ್ಷತೆ ಮರೀಚಿಕೆ

-ಮಲ್ಲಿಕಾರ್ಜುನ ಕೊಚ್ಚರಗಿ

## ಹಸುಗೂಸಿನ ಪಕ್ಕದಲ್ಲೇ ಸಂಬಂಧಿಕರ ಹರಟೆ | ಕಣ್ಮುಚ್ಚಿ ಕುಳಿತ ಹಿಮ್ಸ್ ಆಡಳಿತ

• ಪ್ರಜೋದಯ ವರದಿ

**ಹಾಸನ:** ನಗರದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜನಿಸಿದ ಮಗು ಹಾಗು ತಾಯಿ ಸುರಕ್ಷತೆಗಾಗಿ ಇರುವ ಕೊಠಡಿಗಳು ಜನ ಸಂದಣಿಯಿಂದ ತುಂಬಿ ತುಳುಕುತ್ತಿದ್ದು, ಇದು ಆಸ್ಪತ್ರೆಯೋ ದನಗಳ ಜಾತ್ರೆಯೋ ಎಂಬ ಸಂಶಯ ಮೂಡುತ್ತಿದೆ.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಅಧೀನದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಕಾರ್ಯಾರಂಭ ಮಾಡಿ ವರ್ಷ ಸಮೀಪಿಸುತ್ತಿದೆ. ನಿತ್ಯ 15 ರಿಂದ 20ರಂತೆ ತಿಂಗಳಿಗೆ ಸರಾಸರಿ 500 ಹೆರಿಗೆಯಾಗುತ್ತವೆ. ಸಾಮಾನ್ಯ ಹೆರಿಗೆಯಾದ ತಕ್ಷಣ ಮಗು ಹಾಗು ತಾಯಿಯನ್ನು ಜನರಲ್ ವಾರ್ಡ್‌ಗೆ ಸ್ಥಳಾಂತರಿಸುತ್ತಾರೆ. ಉಸಿರಾಟ ಸಮಸ್ಯೆ, ತೂಕದಲ್ಲಿ ಬದಲಾವಣೆ ಹಾಗು ಇನ್ನಿತರ ಆರೋಗ್ಯ ಸಮಸ್ಯೆಯಿಂದ ಬಳಲುವ ಮಕ್ಕಳನ್ನು ಮಾತ್ರ ನವಜಾ ತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ದಾಖಲಿಸುತ್ತಾರೆ. ಅಲ್ಲಿಗೆ ವೈದ್ಯರು ಹಾಗು ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶವಿಲ್ಲ. ಅದೇ ರೀತಿ ಸಾಮಾನ್ಯ ವಾರ್ಡ್‌ಗೆ ದಾಖಲಿಸುವ ಮಕ್ಕಳ ಬಳಿಯೂ ಗುಂಪು ಗುಂಪಾಗಿ ಸಂಬಂಧಿಕರು ಹೋಗಬಾರದೆಂಬ ನಿಯಮವಿದೆ. ಜನಿಸಿದ ಎರಡು ದಿನಕ್ಕೆ ಹಸುಗೂಸನ್ನು ನೋಡಲು ಕುಟುಂಬಸ್ಥರು ತಂಡೋಪ ತಂಡವಾಗಿ ಬರುತ್ತಾರೆ. ಅಂತಹ ಸಂದರ್ಭದಲ್ಲಿ ಆಸ್ಪತ್ರೆ ಸಿಬ್ಬಂದಿ ಒಬ್ಬೊಬ್ಬರನ್ನೇ ಒಳಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಆದರೆ, ಆಸ್ಪತ್ರೆಯಲ್ಲಿ ಹತ್ತಾರು ಜನರು ಒಂದೇ ಸಮಯಕ್ಕೆ ಪ್ರವೇಶಿಸುವುದರಿಂದ ಮಗು ಹಾಗು ತಾಯಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಸಣ್ಣ ಮಾಹಿತಿಯೂ ವೈದ್ಯರು ಹಾಗು ಮೇಲಾಧಿಕಾರಿಗಳಿಗೆ ಇಲ್ಲವೇ ಎಂಬ ಸಂಶಯ ಮೂಡುತ್ತಿದೆ.

ತಾಯಿ ಹಾಗು ಮಗುವನ್ನು ಕನಿಷ್ಟ ಆರು ತಿಂಗಳವರೆಗೆ ಸೂಕ್ಷ್ಮವಾಗಿಡುವುದು ಅತ್ಯವಶ್ಯ. ಮನೆಯಲ್ಲೂ ಸಹ ಅವರನ್ನು ಪ್ರತ್ಯೇಕ ಕೊಠಡಿಯಲ್ಲಿಟ್ಟು ಭಾರೀ ಜೋಪಾನವಾಗಿ ನೋಡಿಕೊಳ್ಳಲಾಗುತ್ತದೆ. ಮನೆಗೆ ಯಾರೇ ಬಂದರೂ ಕೈಕಾಲು ತೊಳೆದು ಪ್ರವೇಶಿಸುತ್ತಾರೆ. ಶುಚಿತ್ವದ ದೃಷ್ಟಿಯಿಂದಲಾದರೂ ಆ ನಿಯಮ ಜಾರಿಯಲ್ಲಿಲ್ಲ. ಜಾತ್ರೆಗೆ ನುಗ್ಗಿದಂತೆ ನುಗ್ಗುವ ಸಂಬಂಧಿಕರು ಮಗು ಇರುವ ಬೆಡ್ ಮೇಲೆ ಆರಾಮಾಗಿ ಕುಳಿತುಕೊಳ್ಳುವುದು, ಮಾತ್ರವಲ್ಲದೆ ಅದರ ಮೇಲೆಯೇ ಮಲಗುತ್ತಾರೆ. ಇನ್ನು ಮಗು ಹುಟ್ಟಿದ ಸಂಭ್ರಮಕ್ಕೆ ಸಿಹಿ ಪದಾರ್ಥಗಳನ್ನು ತಂದು ಗುಂಪು ಗುಂಪಾಗಿ ಅಲ್ಲಿಯೇ ಸೇವಿಸಿ ತ್ಯಾಜ್ಯವನ್ನು ಅಲ್ಲೇ ಬಿಸಾಡುವುದನ್ನು ಕಾಣಬಹುದು. ಅದೇ ವಾರ್ಡ್‌ನಲ್ಲಿರುವ ಬೇರೆಯವರಿಗೆ ಸಮಸ್ಯೆಯಾಗುತ್ತದೆ. ಮಕ್ಕಳ ಹಿತದೃಷ್ಟಿಗಾಗಿಯಾದರೂ ಕಾಳಜಿಯಿಂದ ವರ್ತಿಸಬೇಕು. ಈ ಸಂಬಂಧ ಮೇಲಾಧಿಕಾರಿಗಳನ್ನು ಕೇಳಿದರೆ ನಮ್ಮ ಗಮನಕ್ಕೆ ಬಂದಿಲ್ಲ, ಪರಿಶೀಲಿಸುತ್ತೇವೆಂಬ ಸಿದ್ಧ ಉತ್ತರ ಬರುತ್ತಿದೆ.

ಹಿಮ್ಸ್‌ನಲ್ಲಿ ಇಷ್ಟೆಲ್ಲಾ ಸಮಸ್ಯೆಗಳು ಉಂಟಾಗಲು ಸಂಸ್ಥೆಯ ಮೇಲಾಧಿಕಾರಿಗಳು ಶಿಸ್ತು ನಿಯಮಗಳನ್ನು ಜಾರಿಗೊಳಿಸದಿರುವುದು ಕಾರಣ ಎನ್ನಲಾಗುತ್ತಿದೆ. ಹಿಮ್ಸ್ ಎಂದರೆ ಸುತ್ತಲಿನ ಜಿಲ್ಲೆಯ ಜನರು ಬರುತ್ತಾರೆ. ಅದೇ ರೀತಿ ಸಿಬ್ಬಂದಿ ಅಚ್ಚುಕಟ್ಟಾಗಿ ಕೆಲಸ ಮಾಡಬೇಕಾಗುತ್ತದೆ. ಹೆರಿಗೆ ವಾಡ್‌ಗೆ ಯಾರು ಬಂದರೂ, ಹೋದರೂ ಪರಿಶೀಲಿಸುವವರು ಇಲ್ಲ. ನರ್ಸ್, ವೈದ್ಯರಿಗೆ ಅದೇ ವಾರ್ಡ್‌ನಲ್ಲಿ ಕೂರಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆಯಾದರೂ ಅವರ ಕೆಲಸದ ಅವಧಿಯನ್ನು ಅವರೇ ನಿರ್ಧರಿಸಿಕೊಂಡಿದ್ದಾರೆಂಬ ಪರಿಸ್ಥಿತಿ ಇದೆ.



### ಆಸನದ ಮೇಲೆ ನಿದ್ರೆಗೆ ಜಾರುವ ಜನರು

ವಾರ್ಡ್‌ನ ಹೊರಗೆ ಗರ್ಭಿಣಿ ಹಾಗು ಬಾಣಂತಿಯರು ಸಂಬಂಧಿಕರು ಕೂರುವುದಕ್ಕಾಗಿ ಆಸನಗಳನ್ನು ಅಳವಡಿಸಲಾಗಿದೆ. ಆದರೆ, ಅವು ಸಂಪೂರ್ಣ ಮುರಿದು ಬೀಳುವ ಸ್ಥಿತಿಯಲ್ಲಿವೆ. ಅವುಗಳ ಮೇಲೆಯೇ ಜನರು ನಿದ್ರೆಗೆ ಜಾರುವುದನ್ನು ಕಾಣಬಹುದು. ನರ್ಸ್ ಹಾಗು ವೈದ್ಯರು ಇದನ್ನೆಲ್ಲಾ ಗಮನಿಸಿದರೂ ಕಂಡು ಕಾಣದಂತೆ ಇರುವುದು ಸಮಸ್ಯೆ ಹೆಚ್ಚಾಗಲು ಕಾರಣವಾಗಿದೆ.

> ನವಜಾತ ಶಿಶುಗಳ ತುರ್ತು ನಿಗಾ ಘಟಕಕ್ಕೆ ಯಾರನ್ನೂ ಬಿಡುವುದಿಲ್ಲ. ಸಾಮಾನ್ಯ ವಾರ್ಡ್ ನಲ್ಲಿ ಈ ರೀತಿ ಸಮಸ್ಯೆ ಇದ್ದರೆ ಪರಿಶೀಲಿಸಲಾಗುವುದು. ನಾನು ಪ್ರತಿ ಎರಡು ದಿನಕ್ಕೊಮ್ಮೆ ಭೇಟಿ ನೀಡಿ ಪರಿಶೀಲಿಸುತ್ತೇನೆ. ಈ ರೀತಿ ಸಮಸ್ಯೆಯಾಗದಂತೆ ಎಚ್ಚರ ವಹಿಸಲಾಗುವುದು.
>
> -ಡಾ|| ರಾಜಣ್ಣ, ಹಿಮ್ಸ್ ನಿರ್ದೇಶಕ

# ವಿದ್ಯುತ್ ಸ್ಪರ್ಶಿಸಿ ಟಿಪ್ಪರ್ ಚಾಲಕ ಸಾವು

• ಪ್ರಜೋದಯ ವರದಿ



**ಬೇಲೂರು:** ಟಿಪ್ಪರ್‌ಗೆ ವಿದ್ಯುತ್ ತಂತಿ ಸ್ಪರ್ಶಗೊಂಡು ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ನೆಟ್ಟೆಕೆರೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಹೊಳೆನರಸೀಪುರ ತಾಲ್ಲೂಕಿನ ಹನುಮನಹಳ್ಳಿ ಗ್ರಾಮದ ದಿಲೀಪ್ (33) ಎಂಬಾತ ಮೃತಪಟ್ಟಿದ್ದಾನೆ. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜುನಾಥ್ ಮನೆ ಮುಂದೆ ಮರಳು ಸುರಿಯಲಾಗುತ್ತಿತ್ತು. ರಸ್ತೆಗೆ ಅಡ್ಡಲಾಗಿ ಟಿಪ್ಪರ್ ನಿಂತಿದ್ದರಿಂದ ಬೇಗ ಅನ್‌ಲೋಡ್ ಮಾಡುವಂತೆ ಮನೆ ಮಾಲೀಕ ಹೇಳಿದ್ದರು. ತರಾತುರಿಯಲ್ಲಿ ಟಿಪ್ಪರ್‌ನ್ನು ಹಿಮ್ಮುಖವಾಗಿ ಓಡಿಸುತ್ತಿದ್ದಾಗ ಮೇಲಿನ ತಂತಿಯನ್ನು ಗಮನಿಸದೆ ಅವಘಡ ಸಂಭವಿಸಿದೆ ಎನ್ನಲಾಗಿದೆ. ಮನೆ ಮಾಲೀಕ ಮಂಜುನಾಥ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

# ಪರಿಷತ್ ನಡೆಯ ವಿರುದ್ಧ ಸಾಹಿತಿಗಳ ಅಸಹನೆ

• ಪ್ರಜೋದಯ ವರದಿ

**ಹಾಸನ:** ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಯಾವ ಉದ್ದೇಶಗಳಿಗಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಇಂದು ಆ ತತ್ವಗಳಿಗೆ ಎಳ್ಳುನೀರು ಬಿಡಲಾಗುತ್ತಿದೆ. ಪ್ರಸ್ತುತ ಕನ್ನಡದ ಸಂಕಷ್ಟಗಳಿಗೆ ಧ್ವನಿಯಾಗದ ಪರಿಷತ್ತಿಗೆ ನಾಲಿಗೆ ಇದೆಯೇ ಎಂದು ಪತ್ರಕರ್ತ ಚಲಂ ಹಡ್ಲಹಳ್ಳಿ ಪ್ರಶ್ನಿಸಿದರು.

ನಗರದ ಸಾಹಿತ್ಯ ಬಳಗದ ವತಿಯಿಂದ ಆಯೋಜಿಸಲಾದ ಕಲ್ಯಾಣ

» ನಾಲ್ಕನೇ ಪುಟದಲ್ಲಿ

## ನಗರದಲ್ಲಿ ಶಾಂತರಸರ ಜನ್ಮ ದಿನೋತ್ಸವ



# ಹೆತ್ತವರು ಕಣ್ಣೀರು ಸುರಿಸುವ ಕೆಲಸ ಮಾಡಬೇಡಿ: ಜಿಲ್ಲಾಧಿಕಾರಿ



• ಪ್ರಜೋದಯ ವರದಿ

**ಹಾಸನ:** ಹೆತ್ತ ತಂದೆ-ತಾಯಿ ಶಾಪ ಹಾಕುವ ಅಥವಾ ಕಣ್ಣೀರು ಸುರಿಸುವ ಕೆಲಸವನ್ನು ಮಕ್ಕಳು ಮಾಡಬಾರದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.


ನಗರದ ಜಿಲ್ಲಾ ಕಾರಾಗೃಹದಲ್ಲಿ ರೋಟರಿ ಕ್ಲಬ್ ಆಫ್ ಹಾಸನ ಸನ್ ರೈಸರ್ಸ್ ವತಿಯಿಂದ ಹಮ್ಮಿಕೊಂಡಿದ್ದ ಖೈದಿಗಳಿಗೆ ಅರಿವು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳು ಕೆಟ್ಟವರಾಗಲಿ ಎಂದು ಬಯಸುವುದಿಲ್ಲ. ಕೆಲವು ಸಲ ಸರಿಯಾದ ಮಾರ್ಗದಲ್ಲಿ ಬೆಳೆಸದಿರುವುದು ಜೈಲುಪಾಲಾಗಲು ಕಾರಣವಾಗುತ್ತದೆ. ಜೈಲುವಾಸಿಗಳು ಇನ್ನಾದರೂ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು. ಇಲ್ಲಿ ಸಮಯ ವ್ಯರ್ಥ ಮಾಡದೆ ದಿನಪತ್ರಿಕೆ, ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ತಪ್ಪು ಮಾಡಿದ ಮಾತ್ರಕ್ಕೆ ಜೀವನ ಮುಗಿಯಿತು ಎಂದು ಭಾವಿಸದೆ ಸರಿಯಾದ ದಾರಿಯಲ್ಲಿ ಸಾಗುವ

» ನಾಲ್ಕನೇ ಪುಟದಲ್ಲಿ

# ಪ್ರೌಢಶಾಲಾ ಶಿಕ್ಷಕರಿಗೆ ಮೌಲ್ಯಮಾಪನ-ಜನಗಣತಿ ಕಾರ್ಯದೊತ್ತಡ

## ಗಡುವು ಮುಂದೂಡಲು ಆಗ್ರಹ



• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮೌಲ್ಯಮಾಪನ ಹಾಗು ಜನಗಣತಿ ಒಟ್ಟಿಗೆ ನಡೆಸಬೇಕಿರುವ ಸಂದಿಗ್ಧತೆಗೆ ಪ್ರೌಢ ಶಾಲಾ ಶಿಕ್ಷಕರು ಸಿಲುಕಿದ್ದು, ಸರ್ಕಾರದ ಕಾರ್ಯಭಾರ ತಲೆನೋವು ತರಿಸಿದೆ.

ಪರೀಕ್ಷೆ ಮುಗಿದ ಬೆನ್ನಲ್ಲೇ ಅಂದರೆ ಏಪ್ರಿಲ್ 24ರೊಳಗೆ ಫಲಿತಾಂಶ ಪ್ರಕಟಿಸುವ ಉಮೇದಿನಲ್ಲಿ ರಾಜ್ಯ ಸರ್ಕಾರ ಇದೆ. ಆದರೆ, ಕೇಂದ್ರ ಸರ್ಕಾರ ಜನಗಣತಿ ಪ್ರಕ್ರಿಯೆ ಪ್ರಾರಂಭಿಸಿರುವುದರಿಂದ ಆ ಹೊರೆಯೂ ಶಿಕ್ಷಕರ ಹೆಗಲೇರಿದೆ. ಹೀಗಾಗಿ ಪರೀಕ್ಷಾ ಮೌಲ್ಯಮಾಪನ ವಿಳಂಬವಾಗುವುದರ ಜೊತೆಗೆ ಫಲಿತಾಂಶ ನಿಗದಿತ ಅವಧಿಯೊಳಗೆ ಪ್ರಕಟವಾಗುವುದು ಅಸಾಧ್ಯ ಎನ್ನಲಾಗಿದೆ.

ಪರೀಕ್ಷಾ ಮೌಲ್ಯ ಮಾಪನವನ್ನು ಏ.15 ರೊಳಗೆ ಪೂರ್ಣಗೊಳಿಸಬೇಕೆಂಬ ಆದೇಶ ಇದೆ. ಈಗ ಮೌಲ್ಯಮಾಪನ ರಾಜ್ಯದ ಹಲವು ಭಾಗಗಳಲ್ಲಿ ನಡೆಯುತ್ತಿದೆ. ಈಗ ಇದೇ ಅವಧಿಯಲ್ಲಿ ಅಂದರೆ ಏ.7 ಮತ್ತು 8ರಂದು ಜನಗಣತಿ ತರಬೇತಿಗೂ ಕೆಲವು ಶಿಕ್ಷಕರನ್ನು ನಿಯೋಜಿಸಲಾಗಿದೆ. ರಾಜ್ಯದಲ್ಲಿ 70 ಸಾವಿರ ಶಿಕ್ಷಕರು ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ಜಿಲ್ಲೆಯಲ್ಲಿ 1800 ಶಿಕ್ಷಕರಿದ್ದಾರೆ. ಇದೇ ಅವಧಿಯಲ್ಲಿ ಜನಗಣತಿ ತರಬೇತಿಯೂ ನಡೆಯಲಿದೆ. ಇದರಿಂದ ಶಿಕ್ಷಕರ ಮೇಲೆ ಕೆಲಸದ ಒತ್ತಡ ಹೆಚ್ಚಾಗಿದೆ. ಒಂದೇ ದಿನದಲ್ಲಿ ಹೆಚ್ಚು ಪೇಪರ್‌ಗಳನ್ನು ಮೌಲ್ಯಮಾಪನ ಮಾಡಲು ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಜನಗಣತಿ ತರಬೇತಿ ಯೋಜನೆ ಏ.10 ರಿಂದ 15ರೊಳಗೆ ಒಟ್ಟು ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ 1,000 ರೂ., ಎರಡನೇ ಹಂತದಲ್ಲಿ 3,000 ರೂ. ಹಾಗು ಮೂರನೇ ಹಂತದಲ್ಲಿ 4,000 ರೂ. ಭತ್ಯೆ ನೀಡಲಾಗುತ್ತದೆ. ಜನಗಣತಿ ತರಬೇತಿಯನ್ನು ಏ.15 ರೊಳಗೆ ಮುಗಿಸಬೇಕೆಂಬ ಆದೇಶವಿದೆ. ಮೊದಲ ಹಂತದ ತರಬೇತಿ ನಡೆಯುತ್ತಿದ್ದು ಏ.8ಕ್ಕೆ ಕೊನೆಗೊಳ್ಳಲಿದೆ. ಎರಡನೇ ಹಂತದ ಹಾಗು ಮೂರನೇ ಹಂತದ ತರಬೇತಿಗೆ ಆಯ್ಕೆ ಮಾಡಿರುವ ಶಿಕ್ಷಕರೇ ಮೌಲ್ಯ ಮಾಪನಕ್ಕೂ ನಿಯೋಜನೆಗೊಂಡಿರುವುದರಿಂದ ಸಮಸ್ಯೆಯಾಗಿದೆ.

ರಾಜ್ಯ ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಪರೀಕ್ಷಾ ಮೌಲ್ಯಮಾಪನಕ್ಕೆ ಬೇಕಾದಷ್ಟು ಸಮಯ ನೀಡಬೇಕು. ಮೌಲ್ಯಮಾಪನ ಮತ್ತು ಜನಗಣತಿ ತರಬೇತಿ ದಿನಾಂಕಗಳನ್ನು ಬದಲಾಯಿಸಬೇಕು. ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆ ನಿಯೋಜಿಸುವ ಶಿಕ್ಷಕರನ್ನು ಜನಗಣತಿ ಕೆಲಸದಿಂದ ಕೈಬಿಡಬೇಕೆಂಬ ಒತ್ತಾಯ ಕೇಳಿ ಬಂದಿದೆ.

### ವಿದ್ಯಾರ್ಥಿಗಳ ಭವಿಷ್ಯ ಮುಖ್ಯ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಜೀವನದಲ್ಲಿ ಮಹತ್ವದ ಘಟ್ಟವಾಗಿದ್ದು, ಪರೀಕ್ಷಾ ಮೌಲ್ಯಮಾಪನ ಅತ್ಯಂತ ಜವಾಬ್ದಾರಿಯುತ ಪ್ರಕ್ರಿಯೆಯಾಗಿದೆ. ಇನ್ನು ಜನಗಣತಿ ರಾಷ್ಟ್ರ ಮಟ್ಟದ ಕಾರ್ಯಕ್ರಮ. ಇದರ ತರಬೇತಿಗೆ ಗೈರಾಗಲು ಸಾಧ್ಯವಿಲ್ಲ. ಈ ಎರಡರಲ್ಲಿ ಯಾವುದಕ್ಕೆ ಗೈರಾದರೂ ಕ್ರಿಮಿನಲ್ ಪ್ರಕರಣ ಎದುರಿಸುವ ಭೀತಿ ಶಿಕ್ಷಕರದ್ದಾಗಿದೆ. ಸೂಕ್ತ ಯೋಜನೆ, ಸಮನ್ವಯ ಕೊರತೆಯಿಂದ ಉಂಟಾದ ಈ ದ್ವಂದ್ವ ನಿಲುವು ಶಿಕ್ಷಕರ ಮೇಲೆ ಅನಗತ್ಯ ಒತ್ತಡ ಹೇರಿದೆ.

### ಪದವಿ ಕಾಲೇಜು ಉಪನ್ಯಾಸಕರಿಗೂ ತೊಂದರೆ

ಜನಗಣತಿ ಪ್ರಕ್ರಿಯೆಗೆ ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಕರು ಮಾತ್ರವಲ್ಲದೆ ಪದವಿ ಕಾಲೇಜುಗಳ ಉಪನ್ಯಾಸಕರನ್ನು ನಿಯೋಜಿಸಿದ್ದು, ಅವರೂ ತೊಂದರೆ ಅನುಭವಿಸುತ್ತಿದ್ದಾರೆ. ಈಗ ಕಿರು ಪರೀಕ್ಷೆ ನಡೆಸುವ ಸಮಯ. ಜನಗಣತಿ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಸರ್ಕಾರ ಆದೇಶಿಸಿರುವುದರಿಂದ ವಿದ್ಯಾರ್ಥಿಗಳ ಕಲಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಆತಂಕ ಹೆಚ್ಚಾಗಿದೆ.

# ಆಶ್ರಯ ಮನೆಗೆ ಸಹಕಾರ ನೀಡಿದ ಶಾಸಕರಿಂದಲೇ ಈಗ ವಿರೋಧ

• ಪ್ರಜೋದಯ ವರದಿ

**ಹಾಸನ:** ತಾವು ಪ್ರತಿಪಕ್ಷದಲ್ಲಿದ್ದಾಗ ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ನೆರವಾಗಿದ್ದ ಶಾಸಕ ಎ. ಮಂಜು ಅವರು ಈಗ ಉಲ್ಟಾ ಹೊಡೆಯುತ್ತಿದ್ದು, ಹತ್ತಾರು ಕುಟುಂಬಗಳು ಬೀದಿಗೆ ಬರುವಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಭೈರೇಗೌಡ ಸಹ ಬಡವರ ಪರವಾಗಿ ಕ್ರಮ ಕೈಗೊಳ್ಳುತ್ತಿಲ್ಲವೆಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಸ್.ಬಿ.ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಅರಕಲಗೂಡು ತಾಲ್ಲೂಕು ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿ 1991-92 ರಲ್ಲಿ ಹಕ್ಕುಪತ್ರ ನೀಡಿದ್ದ ಜಾಗದಲ್ಲಿ ಫಲಾನುಭವಿಗಳು ಕಟ್ಟಿಕೊಂಡಿದ್ದ ಮನೆಗಳನ್ನು ತಹಶೀಲ್ದಾರ್ ಸಿ.ಸೌಮ್ಯ ಅವರು ಏಕಾಏಕಿ ತೆರವುಗೊಳಿಸಿದ್ದಾರೆ. 1991-92ರ ಅವಧಿಯಲ್ಲಿ ಹಕ್ಕುಪತ್ರ

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ಬದುಕಿನಲ್ಲಿ ಅಂಕಿ ಸಂಖ್ಯೆಗಳದ್ದೆ ಸಾಮ್ರಾಜ್ಯ!

ವಿಶ್ವರಂಗ ಒಮ್ಮೆ ಹಾಗೆ ಗಮನಿಸಿ ನೋಡಿ ಬದುಕಿನಲ್ಲಿ ಸಂಖ್ಯೆಗಳದ್ದೇ ಸಾಮ್ರಾಜ್ಯ. ವ್ಯಕ್ತಿ ಎಷ್ಟೇ ಶ್ರೀಮಂತನಿರಲಿ ಅಥವಾ ಬಡವನಿರಲಿ ಎಲ್ಲರ ಬದುಕಿನಲ್ಲೂ ಸಂಖ್ಯೆ ಮಾತ್ರ ಇದ್ದೇ ಇರುತ್ತದೆ. ಸಂಖ್ಯೆಗಳಿಲ್ಲದ ಬದುಕನ್ನು ಇಂದಿಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ವ್ಯಕ್ತಿ ಹುಟ್ಟಿದ ದಿನಾಂಕದಿಂದ ಶುರುವಾಗುವ ಈ ಸಂಖ್ಯೆಗಳ ಆಟ ನಿಲ್ಲುವುದು ಕೂಡ ಸಂಖ್ಯೆಯೊಂದಿಗೆ.

ಸಂಖ್ಯೆ ಅಥವಾ ನಂಬರ್‌ಗಳು ಬದುಕಿನ ಅತಿ ಮುಖ್ಯ ಭಾಗವಾಗಿದೆ. ಕೆಲವೊಮ್ಮೆ ನಾವು ಅದರ ಬಗ್ಗೆ ಮಾತನಾಡದೆ ಇದ್ದರೂ ಅದು ನಮ್ಮ ಜೀವನದಲ್ಲಿ ಮಾತ್ರ ಇದ್ದೇ ಇರುತ್ತದೆ. ಮಕ್ಕಳಿದಾಗ ಶಾಲೆಯಲ್ಲಿ ತೆಗೆಯುವ ಅಂಕ ಮುಖ್ಯವಾದರೆ, ಯವ್ವನದಲ್ಲಿ ಗಳಿಸುವ ಆದಾಯ, ಮಧ್ಯ ವಯಸ್ಸಿನಲ್ಲಿ ಬಿಪಿ ಶುಗರ್ ಸಂಖ್ಯೆ, ಮುಪ್ಪು ಆವರಿಸುತ್ತಾ ತಿನ್ನುವ ಗುಳಿಗೆಗಳ ಲೆಕ್ಕ ಒಟ್ಟಿನಲ್ಲಿ ಬದುಕೆಂದರೆ ಅದೊಂದು ಗಣಿತ. ಎಲ್ಲವೂ ಸಂಖ್ಯಾಶಾಸ್ತ್ರ!

ನಿತ್ಯವೂ ನಡೆಯುವ ಅಭ್ಯಾಸ ಇರುವ ಕಾರಣ ನಡಿಗೆಯಲ್ಲಿ ಹಲವಾರು ರೀತಿಯ ಮಾತುಗಳು ಬೇಡವೆಂದರೂ ಕಿವಿಗೆ ಬೀಳುತ್ತವೆ. ಅಲ್ಲಿ ಬಹಳ ಮುಖ್ಯವಾಗಿ ಕೇಳಿಸುವುದು ಸಂಖ್ಯೆಗಳು. ಇವತ್ತಿನ ದಿನದಲ್ಲಿ ಎಲ್ಲರ ಬಾಯಲ್ಲೂ ಕೋಟಿಗಳು ಸರಾಗವಾಗಿ ಉದುರುತ್ತವೆ.

ಒಂದು ಪುಟಾಣಿ ಮನೆಯನ್ನು ಹೊಂದಬೇಕು ಎಂದರೆ ಕೋಟಿಗಿಂತ ಕಡಿಮೆ ಹಣವಿದ್ದಲ್ಲಿ ಹೇಗೆ ಸಾಧ್ಯ? ಇನ್ನು ಜಮೀನು ಮಾರಿದೆ ಅಷ್ಟು ಬಂತು ಇಷ್ಟು ಬಂತು ಎನ್ನುವ ಮಾತುಗಳು, ಮಗ ಹೊಸದಾಗಿ ವ್ಯಾಪಾರ ಶುರು ಮಾಡಲು ನೀಡಿದ ಹಣ, ಹೀಗೆ ಎಲ್ಲವೂ ದುಡ್ಡಿನ ಮಯ. ಸಂಖ್ಯೆ, ಸಂಖ್ಯೆ, ಸಂಖ್ಯೆ!

ನನ್ನ ಬಾಲ್ಯದಲ್ಲಿ ಹಿರಿಯರು ಅಂದರೆ ಅಜ್ಜಿ-ತಾತಂದಿರು ಈ ಮಟ್ಟಕ್ಕೆ ಸಂಖ್ಯೆಗಳ ವ್ಯಾಮೋಹಕ್ಕೆ ಬಿದ್ದಿರಲಿಲ್ಲ. ನಿವೃತ್ತಿ ನಂತರ ದೇವರ ಸ್ಮರಣೆಯಲ್ಲಿ ದಿನವನ್ನು ದೂಡುತ್ತಿದ್ದರು. ಯಾವಾಗ ಭೂಮಿಗೆ ಚಿನ್ನವನ್ನೂ ಮೀರಿಸಿದ ಬೆಲೆ ಬಂತು ನೋಡಿ, ಅಂದಿನಿಂದ ಮನೆ ಮನೆಯಲ್ಲಿ ಸಂಖ್ಯೆಗಳ ಗುದ್ದಾಟ ಶುರುವಾಯ್ತು. ಅದು ಸಂಖ್ಯೆಗೆ ಮಾತ್ರ ಸೀಮಿತವಾಗದೆ ಸಂಬಂಧಗಳಲ್ಲಿಗೂ ವಿಸ್ತರಿಸಿತು. ಸಂಖ್ಯೆಗಳು ಮನುಷ್ಯನ ಸಂಬಂಧಗಳನ್ನು ಬೆಸೆಯುವ, ಹೊಡೆಯುವ ಮಟ್ಟಕ್ಕೆ ಮುಖ್ಯವಾದವು. ಈಗ ಚುನಾವಣೆ ಸಮಯ ಬೇರೆ!

ಸಂಖ್ಯೆಗಳು ಇನ್ನಷ್ಟು ಮಹತ್ವದ ಪಾತ್ರ ವಹಿಸುತ್ತವೆ. ಈ ಸಂಖ್ಯೆಗಳನ್ನ ಸರಿಯಾಗಿ ಬಳಸಿ ಕೊಳ್ಳುವ ಸಾಮರ್ಥ್ಯವುಳ್ಳವರು ಜಯಗಳಿಸುತ್ತಾರೆ. ಇದನ್ನು ಡೇಟಾ ಕಲೆಕ್ಷನ್ ಅಂತಲೂ ಕರೆಯುತ್ತೇವೆ. ಕೊನೆಗೂ ಹೀಗೆ ಸಂಗ್ರಹಿಸಿದ ಮಾಹಿತಿಯಿಂದ ಫಲಿತಾಂಶ ಏನಾಯಿತು ಎನ್ನುವುದು ಕೂಡ ಸಂಖ್ಯೆಯಲ್ಲಿ ನಮೂದಿಸಿಸಲ್ಪಡುತ್ತವೆ.

ನಾಲ್ಕು ರಾಜ್ಯಗಳಲ್ಲಿ ಚುನಾವಣೆ ಕಾವು ಜೋರಾಗಿದೆ. ದಾವಣಗೆರೆಯಲ್ಲಿ ಉಪಚುನಾವಣೆ ಬಹಳ ಸುದ್ದಿಯಾಗುತ್ತಿದೆ. ಇಲ್ಲಿ ಜಾತಿ, ಧರ್ಮದ ಸಮೀಕರಣಗಳ ಲೆಕ್ಕಾಚಾರ ಜೋರಾಗಿ ನಡೆಯುತ್ತಿದೆ. ಆದರೆ, ಇಲ್ಲೂ ಪ್ರಮುಖ ಪಾತ್ರಧಾರಿ ಸಂಖ್ಯೆ. ನೀವೇ ಗಮನಿಸಿ ನೋಡಿ, ಅಲ್ಲಿ ಅಲ್ಪಸಂಖ್ಯಾತರು ಇಂದಿಗೆ ಅಲ್ಪಸಂಖ್ಯಾತರಾಗಿ ಉಳಿದಿಲ್ಲ.


ಹೀಗಾಗಿ ನಮ್ಮವರಿಗೆ ಸೀಟು ಕೊಡಬೇಕು ಎನ್ನುವ ಹಠಕ್ಕೆ ಬಿದ್ದಿದ್ದಾರೆ. ಆದರೆ, ನಮ್ಮ ದೇಶದಲ್ಲಿ ಮನೆತನಕ್ಕೆ ಇರುವ ಗೌರವದ ಬಗ್ಗೆ ವಿಶೇಷವಾಗಿ ಹೇಳಬೇಕಾದ ಅವಶ್ಯಕತೆಯಿಲ್ಲ. ಅಲ್ಲಿ ಸಂಖ್ಯಾಬಲದ ಆಧಾರದ ಮೇಲೆ ವಿಭಜನೆ ಶುರುವಾಗಿದೆ. ಚುನಾವಣೆಗೆ ಬೇಕಾಗುವ ಅತಿ ಮುಖ್ಯ ಅಂಕಿಅಂಶಗಳೇನು ಎನ್ನುವುದನ್ನು ಅವಲೋಕಿಸೋಣ.

1) ಎಲ್ಲಕ್ಕೂ ಮೊದಲು ಎಷ್ಟು ಜನ ವೋಟ್ ಮಾಡುವ ಅಧಿಕಾರ ಪಡೆದಿದ್ದಾರೆ ಎನ್ನುವುದು ಅತಿ ಮುಖ್ಯ ಮಾಹಿತಿಯಾಗುತ್ತದೆ. ಈ ಬಾರಿ ಎಷ್ಟು ಕೋಟಿ ಜನ ಮತ ಚಲಾಯಿಸುವ ಹಕ್ಕು ಪಡೆದಿದ್ದಾರೆ?

2) ಎರಡು ಕೋಟಿ ಮತದಾರರು ಮೊದಲ ಬಾರಿಗೆ ಮತ ಚಲಾಯಿಸಲಿದ್ದಾರೆಯೇ?

3) ಎಷ್ಟು ಜನ ಅನಿವಾಸಿ ಭಾರತೀಯರು ಮತ ಚಲಾಯಿಸಲು ನೋಂದಣಿ ಮಾಡಿಕೊಂಡಿದ್ದಾರೆ?

> ನನ್ನ ಬಾಲ್ಯದಲ್ಲಿ ಹಿರಿಯರು ಅಂದರೆ ಅಜ್ಜಿ-ತಾತಂದಿರು ಈ ಮಟ್ಟಕ್ಕೆ ಸಂಖ್ಯೆಗಳ ವ್ಯಾಮೋಹಕ್ಕೆ ಬಿದ್ದಿರಲಿಲ್ಲ. ನಿವೃತ್ತಿ ನಂತರ ದೇವರ ಸ್ಮರಣೆಯಲ್ಲಿ ದಿನವನ್ನು ದೂಡುತ್ತಿದ್ದರು. ಯಾವಾಗ ಭೂಮಿಗೆ ಚಿನ್ನವನ್ನೂ ಮೀರಿಸಿದ ಬೆಲೆ ಬಂತು ನೋಡಿ, ಅಂದಿನಿಂದ ಮನೆ ಮನೆಯಲ್ಲಿ ಸಂಖ್ಯೆಗಳ ಗುದ್ದಾಟ ಶುರುವಾಯ್ತು




4) ಮತದಾನ ದಿನಾಂಕ ಯಾವುದು?

5) ಮತ ಎಣಿಕೆ ದಿನಾಂಕ ಯಾವುದು?

6) ಒಟ್ಟು ಎಷ್ಟು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ? ಈ ಸ್ಥಾನಗಳನ್ನು ಪಡೆಯುವ ಆಕಾಂಕ್ಷೆ ಹೊಂದಿರುವ ಉಮೇದುವಾರರ ಸಂಖ್ಯೆಯೆಷ್ಟು?

7) ಮತದಾರರಲ್ಲಿ ಹೆಂಗಸರ ಸಂಖ್ಯೆಯೆಷ್ಟು? ಗಂಡಸರ ಸಂಖ್ಯೆಯೆಷ್ಟು? ಉಮೇದುವಾರರಲ್ಲಿ ಈ ಅನುಪಾತ ಎಷ್ಟು? ಮೀಸಲಾತಿ ಕ್ಷೇತ್ರಗಳೆಷ್ಟು?

8) ಸೂಕ್ಷ್ಮ ಮತಗಟ್ಟೆಗಳ ಲೆಕ್ಕಾಚಾರ, ಚುನಾವಣೆಯ ಅಧಿಕಾರಿಗಳ ಸಂಖ್ಯೆ, ಒಟ್ಟು ಮತಗಟ್ಟೆಗಳೆಷ್ಟು?

ಮೇಲೆ ಹೇಳಿದ ಅಂಶಗಳು ಅತ್ಯಂತ ಮೂಲಭೂತ ಅಂಶಗಳು. ಇದರೊಂದಿಗೆ ಪ್ರತಿ ಹಂತದಲ್ಲೂ ಅವುಗಳನ್ನು ಮತ್ತಷ್ಟು ಆಳವಾಗಿ ವಿಭಾಗಿಸಲಾಗುತ್ತದೆ. ಉದಾಹರಣೆಗೆ ಕೋಟಿ 18 ಅಥವಾ 19 ವರ್ಷದ ಹೊಸ ಮತದಾರರಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯೆಷ್ಟು? ಗಂಡು ಮಕ್ಕಳ ಸಂಖ್ಯೆಯೆಷ್ಟು? ಇವರಲ್ಲಿ ಎಷ್ಟು ಜನ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ? ಎಷ್ಟು ಜನ ಹಳ್ಳಿಗಳಲ್ಲಿ? ಅವರ ಎಕನಾಮಿಕ್ ಬ್ಯಾಕ್‌ಗ್ರೌಂಡ್, ಅವರ ಕಲ್ಚರಲ್ ಬ್ಯಾಕ್ ಗ್ರೌಂಡ್? ಹೀಗೆ ಪ್ರತಿಯೊಂದನ್ನು ಅತ್ಯಂತ ಸೂಕ್ಷ್ಮವಾಗಿ ವಿಭಜಿಸಿ ವಿಶ್ಲೇಷಣೆ ಮಾಡಲಾಗುತ್ತದೆ.

ಹೊಸ ತಲೆಮಾರು ಟ್ವಿಟ್ಟರ್(ಎಕ್ಸ್), ಫೇಸ್ಬುಕ್ ಮತ್ತು ಇನ್ಸ್ಟಾಗ್ರಾಮ್‌ನಲ್ಲಿ ಸದಾ ಕ್ರಿಯಾ ಶೀಲರಾಗಿರುತ್ತಾರೆ. ಎಷ್ಟು ಕೋಟಿ ಜನ ಇಂಟರ್‌ನೆಟ್ ಬಳಕೆದಾರರಿದ್ದಾರೆ. ಇವರೆ ನಿತ್ಯವೂ ತಮಗೆ ಅರಿವಿಲ್ಲದೆ ತಮ್ಮ ಬದುಕುವ ರೀತಿಯನ್ನ, ತಮ್ಮ ಇಷ್ಟ ಅನಿಷ್ಟಗಳನ್ನ, ಬೇಕು ಬೇಡಗಳನ್ನು ಎಲ್ಲವನ್ನೂ ಬಿಟ್ಟು ಹೋಗುತ್ತಿದ್ದಾರೆ. ಇದನ್ನ ಡಿಜಿಟಲ್ ಫೂಟ್ ಪ್ರಿಂಟ್ ಎನ್ನಲಾಗುತ್ತದೆ.

ನಮ್ಮ ಮಾಹಿತಿಗಳನ್ನ ಕಲೆ ಹಾಕಿ ಅವುಗಳನ್ನು ನಮ್ಮ ಪ್ರಚೋದನೆಗೆ ಬಳಸಲಾಗುತ್ತದೆ. ಭಾರತದಲ್ಲಿ ಇಂದು 112 ಕೋಟಿ ಮೊಬೈಲ್ ಫೋನ್‌ಗಳಿವೆ. ಆದರೆ, ಅವುಗಳಲ್ಲಿ ಸ್ಮಾರ್ಟ್ ಫೋನ್‌ಗಳ ಸಂಖ್ಯೆ 70 ಕೋಟಿ. 2027ರ ವೇಳೆಗೆ ಇದು 120 ಕೋಟಿ ತಲುಪಲಿದೆ ಎನ್ನುತ್ತದೆ ಅಂಕಿಅಂಶ. ಅಂದರೆ ಗಮನಿಸಿ ಇಂಟರ್‌ನೆಟ್ ಮತ್ತು ಸೋಶಿಯಲ್ ಮೀಡಿಯಾಗಳು ಅತ್ಯಂತ ಪ್ರಬಲ ಅಸ್ತ್ರಗಳಾಗುತ್ತವೆ. ಅದು ಚುನಾವಣೆ ಇರಬಹದು ಅಥವಾ ಮತ್ತ್ಯಾವುದೇ ಪ್ರಮುಖ ಘಟನೆಯಾಗಿರಬಹದು.

ಸೋಶಿಯಲ್ ಮೀಡಿಯಾ ಅಲ್ಲಿನ್ತ ಫಲಿತಾಂಶದ ಮೇಲೆ ಬೃಹತ್ ಪರಿಣಾಮ ಬೀರುತ್ತದೆ. ಏಕೆಂದರೆ ಸೋಶಿಯಲ್ ಮೀಡಿಯಾ ಸಹಿತ ಒಟ್ಟಾರೆ ಡಿಜಿಟಲ್ ಲೋಕದಲ್ಲಿ ನಾವು ಉಳಿಸುವ ಕುರುಹುಗಳನ್ನು ಬಳಸಿಕೊಂಡು, ಪ್ರತಿಯೊಬ್ಬ ವ್ಯಕ್ತಿಯ ಪ್ರೊಫೈಲ್ ಬಿಲ್ಡ್ ಮಾಡಲಾಗುತ್ತದೆ. ಅದಕ್ಕೆಂದೆ ನೂರಾರು ಕೋಟಿ ರುಪಾಯಿಗಳನ್ನು ವ್ಯಯಿಸುವ ಜನರಿದ್ದಾರೆ. ನೂರಾರು ಕೋಟಿ ವ್ಯಯಿಸುವುದು ಸಾವಿರಾರು ಕೋಟಿ ಗಳಿಸಲು ಎನ್ನುವ ಸೂಕ್ಷ್ಮ ನಿಮಗೀಗಾಗಲೇ ಅರ್ಥವಾಗಿರುತ್ತದೆ.

ಹಾಗೆ ನೋಡಲು ಹೋದರೆ 2014ರಲ್ಲಿ ಶ್ರೀ ನರೇಂದ್ರ ಮೋದಿಯವರ ಗೆಲುವಿಗೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆಲುವಿಗೆ , ಬ್ರೆಕ್ಸಿಟ್ ಎನ್ನುವ ಹೊಸ ನಾಟಕ ಶುರುವಿಗೆ ಎಲ್ಲಕ್ಕೂ ಸೋಶಿಯಲ್ ಮೀಡಿಯಾದ ಕಾಣಿಕೆ ಬಳಷ್ಟಿದೆ. ಆದರೂ ಭಾರತದ ಬಹಳ ಪ್ರದೇಶಗಳಲ್ಲಿ ಇಂದಿಗೂ ಮನೆ ಮನೆಗೂ ಹೋಗಿ ಜನರನ್ನು ಭೇಟಿ ಮಾಡಿ ದಕ್ಷಿಣೆ ನೀಡುವ ಸಂಪ್ರದಾಯ ಕೂಡ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಎಲ್ಲಿಯವರೆಗೆ ನಮ್ಮ ಸಮಾಜ ಜಾತಿ, ಧರ್ಮ ಮತ್ತು ಹಣದ ಆಮಿಷದಲ್ಲಿ ವೋಟ್ ಮಾರುವುದು ನಿಲ್ಲಿಸುವುದಿಲ್ಲ ಅಲ್ಲಿಯ ತನಕ ಖರೀದಿದಾರರು ಕಡಿಮೆಯಾಗುವುದಿಲ್ಲ.

ತಂತ್ರಜ್ಞಾನದ ಸಹಾಯದಿಂದ ಮಾಹಿತಿ ಜನರನ್ನು ಮಾಹಿತಿ ಅತಿ ವೇಗದಲ್ಲಿ ತಲುಪುತ್ತಿದೆ. ಹೀಗೆ ತಲುಪುವ ಮಾಹಿತಿ ಸರಿಯೋ ತಪ್ಪೋ ಎಂದು ನೋಡುವವರಾರು?



ಒಂದು ವಾಟ್ಸ್ಯಾಪ್ ಗ್ರೂಪ್‌ನಲ್ಲಿ 256 ಜನರನ್ನ ಸೇರಿಸಬಹದು. ಮಾಹಿತಿಯನ್ನು ಫಾರ್ವರ್ಡ್ ಮಾಡುವುದನ್ನ ಐದು ಸಂಖ್ಯೆಗೆ ಸೀಮಿತಗೊಳಿಸಲಾಗಿದೆ. ಹೀಗಿದ್ದೂ 1280 ಜನರನ್ನ ರೆಗಳಿಗೆಯಲ್ಲಿ ಸುಮ್ಮನೆ ಒಂದು ಸಣ್ಣ ಬಟನ್ ಒತ್ತುವುದರ ಮೂಲಕ ತಲುಪಿ ಬಿಡಬಹುದು.

ಚುನಾವಣೆ ಬರುತ್ತದೆ ಹೋಗುತ್ತದೆ. ಆ ವಿಷಯ ಹಾಗಿರಲಿ, ಜನಸಂಖ್ಯಾ ಸ್ಫೋಟದೊಂದಿಗೆ ಮಾಹಿತಿ ಸ್ಫೋಟವಾಗುತ್ತಿದೆ. ಸರಿಯೋ ತಪ್ಪೋ ತಿಳಿಯದ ವಯಸ್ಸಿನ ಮಕ್ಕಳ ಕೈಯಲ್ಲಿ ಸ್ಮಾರ್ಟ್ ಫೋನ್ ರಾರಾಜಿಸುತ್ತಿದೆ. ಈ ವಿಸ್ಫೋಟವನ್ನು ತಡೆಯುವವರಾರು? ನಮ್ಮಲ್ಲಿ ಚುನಾವಣೆಯನ್ನು ಪ್ರಣಾಳಿಕೆ ಅವಲಂಬಿಸಿ ಮಾಡುವುದೆಂದು? ಯಾವುದೇ ರಾಜಕೀಯ ಪಕ್ಷ ಇಂತಹ ವಿಸ್ಫೋಟವನ್ನು ತಡೆಯುತ್ತೇವೆ ಎನ್ನುವ ಪ್ರಣಾಳಿಕೆಯನ್ನು ಏಕೆ ಬಿಡುಗಡೆ ಮಾಡುವುದಿಲ್ಲ? ಕೈಲಿರುವ ಫೋನ್ ಸ್ಮಾರ್ಟ್ ಆದರೆ ಸಾಕೆ? ನಾವೆ ಧಾವಂತದಿಂದ ಓಡುತ್ತಿದ್ದೇವೆ, ವಿಪರ್ಯಾಸವೆಂದರೆ ಎಲ್ಲಿಗೆ ಎಂದು ಯಾರಿಗೂ ಗೊತ್ತಿಲ್ಲ. ಓಡುವ ಆತುರದಲ್ಲಿ ಎಲ್ಲಿಗೆ ಎಂದು ಕೇಳುವ ಯೋಚನೆಯೂ ನಮಗಿಲ್ಲ.

ಮಗು ಊಟ ಮಾಡುವುದಿಲ್ಲ ಎನ್ನುವ ಕಾರಣಕ್ಕೆ ಮೊಬೈಲ್ ಕೈಲಿಡುವುದರಿಂದ ಇದು ಶುರುವಾಗುತ್ತೆ. ಆಮೇಲೆ ಗಲಾಟೆ ಮಾಡುತ್ತೆ ಎಂದು ಸುಮ್ಮನಿರಿಸಲು ಮೊಬೈಲ್ ನೀಡುತ್ತೇವೆ. ಆಮೇಲೆ ಅದು ಅಡಿಕ್ಷನ್ ಹಂತವನ್ನು ತಲುಪುತ್ತದೆ. ಸ್ಮಾರ್ಟ್ ಫೋನ್ ಬಳಸುತ್ತ ಬೆಳೆಯುವ ಇಂದಿನ ಯುವ ಜನತೆಗೆ ತಮ್ಮದು ಎನ್ನುವ ಅನುಭವಗಳು ಕಡಿಮೆ.

ಯುಟ್ಯೂಬ್ ವಿಡಿಯೋದಲ್ಲಿ ತೋರಿಸಿದ್ದು, ಹೇಳಿದ್ದು, ಇಂಟರ್‌ನೆಟ್‌ನಲ್ಲಿ ಓದಿದ್ದು, ನೋಡಿದ್ದು ಗ್ರಹಿಸಿಕೊಳ್ಳುತ್ತಾ ಮತ್ತು ಅದನ್ನೇ ಸತ್ಯವೆಂದು ನಂಬುತ್ತಾ ಹೋಗುತ್ತವೆ. ಇವತ್ತಿನ ದಿನದಲ್ಲಿ ಒಂದು ವರ್ಗದ ಜನರನ್ನು ಬಹಳ ಸುಲಭವಾಗಿ ಬೇಕಾದ ಕಡೆಗೆ ಎಳೆದುಕೊಂಡು ಬಿಡಬಹುದು. ಇವತ್ತಿನ ಕಾಲಘಟ್ಟದಲ್ಲಿ ವಿದ್ಯಾವಂತರಿಗೆ ಕೆಲಸ ಸಿಗುತ್ತದೆ ಎನ್ನುವ ಗ್ಯಾರಂಟಿ ಇಲ್ಲ.

ಒಂದು ದಶಕದ ಹಿಂದೆ ಚನ್ನಾಗಿ ಓದಿದರೆ ಉತ್ತಮ ಭವಿಷ್ಯವಿದೆ ಎಂದು ಮಕ್ಕಳಿಗೆ ಹೇಳುತ್ತಿದ್ದರು. ಹೇಳಬಹುದಾದ ಸನ್ನಿವೇಶವಿತ್ತು. ಇವತ್ತು ಪೋಷಕರು ಕೂಡ ಧೈರ್ಯವಾಗಿ ವಿದ್ಯಾಭ್ಯಾಸ ಮಾಡಿದವರಿಗೆ ಉತ್ತಮ ಭವಿಷ್ಯವಿದೆ ಎಂದು ಹೇಳಲು ಸಾಧ್ಯವಿಲ್ಲ.

ಎರಡು ಸಾವಿರ ಇಸವಿಯಿಂದ ಈಚೆಗೆ ಹುಟ್ಟಿದ ಮಕ್ಕಳ ಸಂಖ್ಯೆಯೆಷ್ಟು? ನಮ್ಮ ದೇಶದಲ್ಲಿ ಯಾವ ಸಂಖ್ಯೆಯೂ ನಿಖರವಾಗಿ ಹೇಳಲಾಗುವುದಿಲ್ಲ ಎನ್ನುವುದು ಮಾತ್ರ ತಂತ್ರಜ್ಞಾನ ಇಷ್ಟೊಂದು ಬೆಳೆದಿರುವ ಸಮಯದಲ್ಲಿ ವಿಪರ್ಯಾಸವೇ ಸರಿ.

ಅಂದಾಜಿನ ಪ್ರಕಾರ ಆ ಸಂಖ್ಯೆ 35 ಕೋಟಿ ಮೀರುತ್ತದೆ. ಅಂದರೆ ಒಂದು ದೇಶದ 1/4 ಭಾಗ ಮತದಾರರು ಅದೆಷ್ಟು ಸುಲಭದ ತುತ್ತು ಎನ್ನುವುದನ್ನು ಊಹಿಸಿಕೊಳ್ಳಿ. ಹೆಚ್ಚಿನದನ್ನು ಹೇಳುವ, ಬರೆಯುವ ಅವಶ್ಯಕತೆಯಿಲ್ಲ ಎಂದುಕೊಳ್ಳುವೆ.

ರಾಜಕೀಯದಲ್ಲಿ ಪರ್ಮನೆಂಟ್ ಶತ್ರು ಅಥವಾ ಮಿತ್ರರಿಲ್ಲ ಎಂದು ಹೇಳಿ ನಮ್ಮನ್ನು ನಂಬಿಸಲಾಗಿದೆ. ನಂಬಿಸುವ ಅವಶ್ಯಕತೆಯಿಲ್ಲ. ನಾವು ಸುಲಭಕ್ಕೆ ನಂಬಿ ಬಿಡುತ್ತೇವೆ. ಹೀಗಾಗಿ ಚುನಾವಣೆ ಸಮಯದಲ್ಲಿ ಅಂಕಿ ಸಂಖ್ಯೆಯಗಳ ಲೆಕ್ಕಾಚಾರ ಜೋರಾಗುತ್ತದೆ. ಲಾಭ-ನಷ್ಟದ ಆಧಾರದ ಮೇಲೆ ಮಾತುಗಳು, ಭಾಷಣಗಳು, ಕಪ್ಪೆ ಜಿಗಿತಗಳು ಶುರುವಾಗುತ್ತವೆ. ಆದರೆ, ಕಾರ್ಯಕರ್ತನ ಮನಸ್ಥಿತಿ ಮಾತ್ರ ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ.

ಮೇಲೆ ಕುಳಿತವರು ಕ್ಷಣ ಮಾತ್ರದಲ್ಲಿ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನಿರ್ಧಾರ ತೆಗೆದುಕೊಂಡು ಬಿಡುತ್ತಾರೆ. ಆದರೆ ಕಾರ್ಯಕರ್ತ? ಇದು ಇಲ್ಲಿಯವರೆಗಿನ ಕಥೆಯಾದರೆ, ದಾವಣಗೆರೆ ಇದಕ್ಕೂ ಹೊಸ ಭಾಷ್ಯ ಬರೆಯುತ್ತಿದೆ.

ಅಲ್ಪ ಸಮುದಾಯದ ನಾಯಕರು ತಮ್ಮ ಸಮುದಾಯದ ಜನರಿಗೆ ತಮ್ಮ ಸಮುದಾಯದ ಉಮೇದುವಾರನಿಗೆ ವೋಟ್ ಮಾಡಬೇಡಿ ಎನ್ನುತ್ತಿದ್ದಾರೆ! ಈಗ ಹೇಳಿ ಬದುಕನ್ನು ಆಳುತ್ತಿರುವುದು ಅಂಕಿ ಸಂಖ್ಯೆಯಲ್ಲದೆ ಬೇರೇನು?

**– ರಂಗಸ್ವಾಮಿ** ಎಂ



» ಈ ಗುಣಗಳಿಂದಾಗಿ, ಬದನೆಕಾಯಿ ಸೇವನೆಯು ತೂಕವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಕಡಿಮೆ ಕಾರ್ಬೋಹೈಡ್ರೇಟ್‌ಗಳು ಮತ್ತು ಹೆಚ್ಚಿನ ಫೈಬರ್ ಅಂಶವು ಬದನೆಕಾಯಿಯನ್ನು ಮಧುಮೇಹಿಗಳಿಗೂ ಸೂಕ್ತ ಆಹಾರವನ್ನಾಗಿ ಮಾಡಿದೆ.

## ಬದನೆಕಾಯಿಯ ಆರೋಗ್ಯ ಪ್ರಯೋಜನಗಳು

ಊಟಕ್ಕೆ ಬದನೆಕಾಯಿ ಪಲ್ಯ ಇದೆ ಎಂದಾಕ್ಷಣವೇ ಮೂಗು ಮುರಿಯುವವರೇ ಹೆಚ್ಚು. ಒಂದು ಸಮೀಕ್ಷೆಯ ಪ್ರಕಾರ (ಸತ್ಯಾಂಶ ಗೊತ್ತಿಲ್ಲ) ಜನರು ಕಡಿಮೆ ಇಷ್ಟ ಪಡುವ ತರಕಾರಿಗಳಲ್ಲಿ ಬದನೆಕಾಯಿಗೆ ಮೊದಲ ಸ್ಥಾನವಂತೆ. ಉದ್ದ ಬದನೆ, ದಪ್ಪ ಬದನೆ, ಕೆಂಪು ಬದನೆ, ಹಸಿರು ಬದನೆ, ಬಿಳಿ ಬದನೆ, ನೇರಳೆ ಬದನೆ ಹೀಗೆ ಹತ್ತು ಹಲವಾರು ಬಗೆಯ ಬದನೆಕಾಯಿಗಳು ಮಾರುಕಟ್ಟೆಯಲ್ಲಿ ಲಭ್ಯ. ಜಾಗತಿಕ ಸೂಚ್ಯಂಕ ಹೊಂದಿರುವ ಮಟ್ಟು ಗುಳ್ಳವಂತೂ ವಿಶ್ವ ಪ್ರಸಿದ್ಧ. ಉಡುಪಿ ಜಿಲ್ಲೆಯ ಮಟ್ಟು ಎಂಬ ಊರಿನಲ್ಲಿ ಬೆಳೆಯುವ ಈ ಗುಳ್ಳವಂತೂ ತನ್ನ ತೆಳುವಾದ ಸಿಪ್ಪೆ, ಬಾಯಿಯಲ್ಲಿ ನೀರೂರಿಸುವ ರುಚಿಗೆ ಪ್ರಸಿದ್ಧಿ. ಇದರ ಪೋಡಿ ಅಥವಾ ಎಣ್ಣೆಗಾಯಿ ಮಾಡಿದರಂತೂ ಅದೇ ಮೃಷ್ಟಾನ್ನ ಭೋಜನ. ಬದನೆಕಾಯಿಯನ್ನು ಇಷ್ಟ ಪಡುವವರು ಮತ್ತು ಇಷ್ಟ ಪಡದವರೂ ಅದರ ಆರೋಗ್ಯಕಾರಿ ಗುಣಗಳನ್ನು ಓದಲೇ ಬೇಕು.

ಬದನೆಕಾಯಿ ದೇಹವನ್ನು ಸದೃಢವಾಗಿಡುವಲ್ಲಿ ಬಹಳ ಪರಿಣಾಮಕಾರಿ. 100 ಗ್ರಾಂ ಬದನೆಕಾಯಿಯಲ್ಲಿರುವ ಪೋಷಕಾಂಶಗಳ ಬಗ್ಗೆ ಹೇಳುವುದಾದರೆ. ಇದು 4% ಕಾರ್ಬೋಹೈಡ್ರೇಟ್‌ಗಳು, 1.4% ಪ್ರೋಟೀನ್, 0.3% ಕೊಬ್ಬು ಮತ್ತು 9% ವರೆಗೆ ಆಹಾರದ ನಾರನ್ನು ಹೊಂದಿರುತ್ತದೆ. ಇದರ ಜೊತೆಗೆ. ಇದು 20% ವಿವಿಧ ಜೀವಸತ್ವಗಳು ಮತ್ತು 26% ಕಬ್ಬಿಣ-ಕ್ಯಾಲ್ಸಿಯಂ ಮತ್ತು ಅನೇಕ ಖನಿಜಗಳನ್ನು ಸಹ ಒಳಗೊಂಡಿದೆ.

ಯಾವುದೇ ಆಹಾರವನ್ನು ಸಮತೋಲಿತ ಆಹಾರವನ್ನಾಗಿ ಮಾಡಲು ಬದನೆಕಾಯಿಯಲ್ಲಿರುವ ಪೋಷಕಾಂಶಗಳ ಸಂಯೋಜನೆ ಅತ್ಯಗತ್ಯ ಎಂದು ವಿಜ್ಞಾನ ಮತ್ತು ಆಯುರ್ವೇದ ಎರಡೂ ನಂಬುತ್ತವೆ. ವಿಶೇಷವೆಂದರೆ 100 ಗ್ರಾಂ ಬದನೆಕಾಯಿಯಲ್ಲಿ ಕೇವಲ 24 ಕೆ.ಸಿ.ಎಲ್. ಇರುತ್ತದೆ. ಅಂದರೆ ದೇಹವನ್ನು ಸದೃಢವಾಗಿಡಲು ಪೋಷಕಾಂಶಗಳ ಕೊರತೆಯಿಲ್ಲ. ಬದನೆಕಾಯಿ ಸಿಪ್ಪೆಯಲ್ಲಿರುವ ಅಂಶಗಳು ಮೆದುಳಿಗೆ ಪ್ರಯೋಜನಕಾರಿ. ಈ ಗುಣಗಳಿಂದಾಗಿ, ಬದನೆಕಾಯಿ ಸೇವನೆಯು ತೂಕವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಕಡಿಮೆ ಕಾರ್ಬೋಹೈಡ್ರೇಟ್‌ಗಳು ಮತ್ತು ಹೆಚ್ಚಿನ ಫೈಬರ್ ಅಂಶವು ಬದನೆಕಾಯಿಯನ್ನು ಮಧುಮೇಹಿಗಳಿಗೂ ಸೂಕ್ತ ಆಹಾರವನ್ನಾಗಿ ಮಾಡಿದೆ. ಬದನೆಕಾಯಿಯ ಮೇಲಿನ ಸಂಶೋಧನೆಯು ಬದನೆಕಾಯಿ ಮೆದುಳಿಗೆ ಪ್ರಯೋಜನಕಾರಿ ಎಂದು ತೋರಿಸಿದೆ. ಬದನೆಕಾಯಿಯ ಚರ್ಮವು ಮೆದುಳಿನ ಕೋಶಗಳ ಕ್ಷೀಣತೆಯನ್ನು ತಡೆಯುವ ಶಕ್ತಿಶಾಲಿ ಉತ್ಕರ್ಷಣ ನಿರೋಧಕವನ್ನು ಹೊಂದಿರುತ್ತದೆ. ಆಹಾರ ತಜ್ಞೆ ಸಿಮ್ಮಿ ಬಬ್ಬರ್ ಅವರ ಪ್ರಕಾರ, ಬದನೆಕಾಯಿಯಲ್ಲಿರುವ ವಿಟಮಿನ್ ಬಿ6, ಫೋಲೇಟ್ (ಬಿ9), ಬಿ5, ಪೊಟ್ಯಾಸಿಯಮ್ ಹೊಟ್ಟೆಯನ್ನು ಸ್ವಚ್ಛವಾಗಿಡಲು ಸಹಾಯ ಮಾಡುತ್ತದೆ. ಬದನೆಕಾಯಿ ಸೇವಿಸುವುದರಿಂದ ದೇಹದಲ್ಲಿನ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ.

ಬದನೆಕಾಯಿ ಸೇವನೆಯು ದೇಹದ ಕೀಲುಗಳಿಗೆ ಸಹಾಯ ಮಾಡುತ್ತದೆ. ಇದು ಹೃದಯಕ್ಕೆ ಶಕ್ತಿಯನ್ನು ನೀಡುತ್ತದೆ. ಹೃದಯ ರೋಗ ಮತ್ತು ವಾತ ರೋಗದಲ್ಲಿ ಇದು ಪ್ರಯೋಜನಕಾರಿಯಾಗಿದೆ. ಬೆಂಕಿಯಲ್ಲಿ ಹುರಿದ ಬದನೆಕಾಯಿಯ ಪೇಸ್ಟ್ ಪಿತ್ತವನ್ನು ಶಾಂತಗೊಳಿಸುತ್ತದೆ. ವಾತ ಹಾಗೂ ಪಿತ್ತರಸದ ಕಾಯಿಲೆಗಳನ್ನು ತೆಗೆದುಹಾಕುತ್ತದೆ. ಜೊತೆಗೆ, ಬಿಳಿಬದನೆ ರಕ್ತದಲ್ಲಿನ ಸಕ್ಕರೆಯನ್ನು ಸಹ ನಿಯಂತ್ರಿಸುತ್ತದೆ. ಇದು ಸಾಕಷ್ಟು ಫೈಬರ್ ಅನ್ನು ಒಳಗೊಂಡಿರುವ ಕಾರಣ, ಇದು ಜೀರ್ಣಾಂಗವ್ಯೂಹದ ಮೂಲ ಹಾದುಹೋಗುತ್ತದೆ. ಫೈಬರ್ ದೇಹದಲ್ಲಿನ ಸಕ್ಕರೆಯ ಹೀರಿಕೊಳ್ಳುವಿಕೆ ಮತ್ತು ಹೀರಿಕೊಳ್ಳುವಿಕೆಯ ಪ್ರಮಾಣವನ್ನು ನಿಧಾನಗೊಳಿಸುವ ಮೂಲಕ ರಕ್ತದಲ್ಲಿನ ಸಕ್ಕರೆಯನ್ನು ಕಡಿಮೆ ಮಾಡುತ್ತದೆ. ಈಗ ಗೊತ್ತಾಯಿತಲ್ಲವೇ ಬದನೆಕಾಯಿಯ ಆರೋಗ್ಯಕಾರಿ ಗುಣಗಳು. ಬದನೆ ತಿನ್ನದೇ ಇರುವವರೂ ಚಪ್ಪರಿಸಿ ತಿನ್ನುವಂತಹ ಖಾದ್ಯಗಳು ಈಗ ಹೋಟೇಲ್‌ಗಳಲ್ಲಿ ದೊರೆಯುತ್ತವೆ. ಮನೆಯಲ್ಲಿ ಅಜ್ಜಿಯರು ಇದ್ದರೆ ಅವರು ಬದನೆಕಾಯಿಯ ಅದ್ಭುತ ಪಲ್ಯಗಳನ್ನು ಮಾಡಬಲ್ಲರು. ಇನ್ನೇಕೆ ತಡ ಬದನೆಕಾಯಿ ಪಲ್ಯ, ಹುಳಿ, ಸಾಂಬಾರ್, ಪೋಡಿ ಮಾಡಿಕೊಂಡು ತಿನ್ನಿ

## ಸಿದ್ದಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು



ಇಬ್ಬರು ಮನುಷ್ಯರ ಆಯಸ್ಸನ್ನು ಒಬ್ಬರೇ ಪಡೆದ ಅದೃಷ್ಟವಂತರ ಸಾಧನೆಯ ಒಂದು ನೋಟ. ನಡೆದಾಡುವ ದೇವರಲ್ಲ, ನಲಿದಾಡುವ - ನುಡಿದಾಡಿದ ಜೀವಪ್ರೀತಿಯ ನಿಜ ಮನುಷ್ಯನಾಗಿದ್ದ ಸಿದ್ದಗಂಗೆಯ ಶಿವಕುಮಾರ ಸ್ವಾಮಿ ಎಂಬ ಶಿವಣ್ಣ (01/04/1907 – 21/01/2019). ಸಾಧಾರಣ ಕುಟುಂಬದ ಬಾಲಕನೊಬ್ಬ ಉಚಿತ ವಸತಿ ಶಾಲೆಯ ವಿದ್ಯಾರ್ಥಿಯಾಗಿ ತನ್ನ ವಿನಯ, ಪ್ರತಿಭೆ, ಜ್ಞಾನ, ನಡವಳಿಕೆಯಿಂದ - ಪರಿಸ್ಥಿತಿ ನಿರ್ಮಿಸಿದ ಅವಕಾಶದಿಂದ ಸನ್ಯಾಸತ್ವ ಸ್ವೀಕರಿಸಿ ಸಿದ್ದಗಂಗೆ ಎಂಬ ಸ್ಥಳದ ಸಣ್ಣ ಮಠ ಒಂದಕ್ಕೆ ಮಠಾಧಿಪತಿಯಾಗುತ್ತಾನೆ. ನಂತರ ಅವನು ಅವರಾಗಿ, ಸ್ವಾಮಿಗಳಾಗಿ ತನ್ನ ಕಾಯಕ ಪ್ರಾರಂಭಿಸುತ್ತಾರೆ.

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಮತ್ತು ಸ್ವಾತಂತ್ರ್ಯ ನಂತರವು ಕೂಡ ವಿದ್ಯೆ ಮತ್ತು ಊಟಕ್ಕೆ ನಿಕಟ ಸಂಬಂಧವಿರುತ್ತದೆ. ಬಡತನದ ಕಾರಣದಿಂದಾಗಿ ಮೊದಲು ಊಟ ನಂತರ ಶಾಲೆ ಎಂಬ ವಾತಾವರಣ. ಇದನ್ನು ಗ್ರಹಿಸಿದ ಶಿವಕುಮಾರ ಸ್ವಾಮಿಗಳು ತನ್ನ ಮಠದ ಮೂಲ ಧ್ಯೇಯವಾದ ಅನ್ನ ದಾಸೋಹ ಮತ್ತು ಅಕ್ಷರ ದಾಸೋಹದ ಜೊತೆಗೆ ಆಶ್ರಯ ದಾಸೋಹದ ಮಹತ್ವ ಅರಿತು ಅದಕ್ಕಾಗಿ ಇಡೀ ಬದುಕನ್ನು ಸಮರ್ಪಿಸುತ್ತಾರೆ. ತ್ರಿವಿಧ ದಾಸೋಹಿ ಎಂಬ ಹೆಸರು ಗಳಿಸುತ್ತಾರೆ. ಖಾವಿ ತೊಟ್ಟು ಬಹುತೇಕ ಭಿಕ್ಷೆಗೆ ಹತ್ತಿರದ ದಾನ ಬೇಡುತ್ತಾ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ವಸತಿ ಮತ್ತು ಶಿಕ್ಷಣದ ಅವಕಾಶ ಕಲ್ಪಿಸುತ್ತಾರೆ. ಒಂದು ಹಂತದ ನಂತರ ಆ ಸಂಸ್ಥೆ ತಾನಾಗಿಯೇ ಬೆಳೆಯುತ್ತಾ ಬೃಹದಾಕಾರ ತಾಳುತ್ತದೆ. ಅಲ್ಲಿ ಕಲಿತ ಅನೇಕರು ವಿಶ್ವದ ನಾನಾ ಕಡೆ ಒಳ್ಳೆಯ ಸ್ಥಾನಮಾನ ಗಳಿಸುತ್ತಾರೆ.

ಭಾರತದಲ್ಲಿ ಸಿದ್ದಗಂಗೆ ಶಿಕ್ಷಣ ಮತ್ತು ಅನ್ನದಾನದಲ್ಲಿ ಮಹತ್ವದ ಸ್ಥಾನ ಗಳಿಸುತ್ತದೆ. ಬಹುತೇಕ ಎಲ್ಲಾ ರಾಷ್ಟ್ರಪತಿ, ಪ್ರಧಾನಿಗಳು ಸಹ ಇಲ್ಲಿಗೆ ಭೇಟಿ ನೀಡುತ್ತಾರೆ. ರಾಜ್ಯದ ಎಲ್ಲಾ ಅಧಿಕಾರಸ್ಥರು ಸಹ ಶಿವಕುಮಾರ ಸ್ವಾಮಿಗಳ ಆಶೀರ್ವಾದ ಪಡೆಯಲು ಬರುತ್ತಾರೆ. ಮುಂದೆ ಸಂಸ್ಥೆ ದೊಡ್ಡದಾಗಿ ಹಣಕಾಸಿನ ವ್ಯವಹಾರ ಹೆಚ್ಚಾದಂತೆ ಸಹಜವಾಗಿ ಭ್ರಷ್ಟರು ಮತ್ತು ರಾಜಕಾರಣಿಗಳು ಒಳ ನುಸುಳುತ್ತಾರೆ. ಉತ್ತರಾಧಿಕಾರಿ ಗೌರಿಶಂಕರ ಸ್ವಾಮಿಗಳು ಮತ್ತು ಇವರ ಮಧ್ಯೆ ಗಲಾಟೆ ಗಲಭೆ ಗೊಂದಲ ಹೊಡೆದಾಟ ಪೋಲೀಸ್ ನ್ಯಾಯಾಲಯ ಹೀಗೆ ಸುಮಾರು ಒಂದು ದಶಕದಷ್ಟು ಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗುತ್ತದೆ. ಕಾಲಾ ನಂತರದಲ್ಲಿ ಅದು ಒಂದಷ್ಟು ಹೊಂದಾಣಿಕೆಯಿಂದ ತಹ ಬಂದಿಗೆ ಬರುತ್ತದೆ.

ಆದರೆ ಅಲ್ಲಿಂದ ಮಠದ ಮೇಲೆ ಒಂದಷ್ಟು ಪಕ್ಷ ರಾಜಕೀಯವೂ ನಿಯಂತ್ರಣ ಸಾಧಿಸುತ್ತದೆ. ಏನೇ ಆದರೂ ಬದುಕಿನ ಕೆಲವು ವರ್ಷಗಳನ್ನು ಹೊರತುಪಡಿಸಿ ಶಿವಕುಮಾರರು ಉಳಿದ ಬಹುತೇಕ ಸಮಯದಲ್ಲಿ ತಟಸ್ಥ ನೀತಿಯನ್ನು ಅನುಸರಿಸಿ ಯಾವುದೇ ಪಕ್ಷಪಾತಕ್ಕೆ ಬಹಿರಂಗವಾಗಿ ಅವಕಾಶ ಕೊಡುವುದಿಲ್ಲ. ಶಿಸ್ತಿನ ಬದುಕಿನಿಂದ ತಮಗೆ ಲಭಿಸಿದ ದೀರ್ಘಕಾಲದ ಆಯಸ್ಸು ಮತ್ತು ಆರೋಗ್ಯವನ್ನು ಸಂಪೂರ್ಣವಾಗಿ ಮತ್ತು ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಒಬ್ಬ ಸಾಮಾನ್ಯ ವ್ಯಕ್ತಿಯ ಅಸಾಮಾನ್ಯ ಸಾಧನೆ ಇದು ಎಂದು ಮುಂದಿನ ಪೀಳಿಗೆಗೆ ಅರ್ಥವಾಗಬೇಕೆ ಹೊರತು ಅವರು ದೇವರೆಂಬ ಪವಾಡ ಪುರುಷ ಎಂದು ಬಿಂಬಿತವಾಗಬಾರದು. ಅದು ಅಪಾಯಕಾರಿ ಮತ್ತು ಐತಿಹಾಸಿಕ ವಂಚನೆಯಾಗುತ್ತದೆ.

ಹೇಗೆಂದರೆ, ನಮ್ಮ ಜನರಲ್ಲಿ ದೇವರೆಂಬ ಕಲ್ಪನೆ. ಅತಿಮಾನುಷ, ಸರ್ವಶಕ್ತ, ಸರ್ವಾಂತರ್ಯಾಮಿ, ಮಾಯಾವಿ, ಬೇಡಿದ್ದನ್ನು ಪೂರೈಸುವವನು. ಆತ ಅದೃಶ್ಯವಾಗಿಯೇ ಎಲ್ಲವನ್ನೂ ನಿಯಂತ್ರಿಸಬಲ್ಲ ಶಕ್ತಿ ಎಂದು ನಂಬಲಾಗಿದೆ. ಅದಕ್ಕೆ ಮೂರ್ತರೂಪ ನೀಡಿ ಭಕ್ತಿಯ ಕಡ್ಡಿ ಕರ್ಪೂರ ಹೂವಿನ ಅಲಂಕಾರ ಮಾಡಿ ನಮಸ್ಕರಿಸಲಾಗುತ್ತದೆ. ಆರಾಧನಾ ಭಾವ ಮಾತ್ರ ಅಲ್ಲಿ ಉಳಿಯುತ್ತದೆ. ಆದರೆ ಈ ಬಡ ಶಿವಣ್ಣ ಆ ಕಲ್ಪನೆಯ ದೇವರು ಮಾಡದ ಕೆಲಸವನ್ನು ಮಾಡಿದ್ದಾರೆ. ಆ ದೇವರು ಕೊಡಲು ಸಾಧ್ಯವಾಗದ ಅನ್ನ, ಆಹಾರ, ಶಿಕ್ಷಣ, ಆಶ್ರಯ, ಉದ್ಯೋಗವನ್ನು ಲಕ್ಷಾಂತರ ಬಡ ನಿರ್ಗತಿಕ ಜನರಿಗೆ ನೀಡಿ ವಾಸ್ತವದಲ್ಲಿ ಮನುಷ್ಯನೊಬ್ಬ ಸಹಜವಾಗಿಯೇ ಇದನ್ನು ಸಾಧಿಸಬಹುದು ಎಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದ್ದಾರೆ.

ಅದನ್ನು ನಾವು ಅರ್ಥಮಾಡಿಕೊಂಡು ಅದರಿಂದ ಸ್ಪೂರ್ತಿ ಪಡೆದು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕೆ ಹೊರತು ನಡೆದಾಡುವ ದೇವರೆಂದು, ಅವರ ಸಹಜ, ಸ್ವಾಭಾವಿಕ ಮತ್ತು ಅಪರೂಪದ ದೀರ್ಘಾಯುಷ್ಯವನ್ನು ಅತಿಯಾಗಿ ರಂಜಿಸಿ ಇಚ್ಛಾ ಮರಣಿ ಎಂದು ಹೇಳುತ್ತಾ ಜನ ಸಾಮಾನ್ಯರಿಂದ ದೂರ ಮಾಡಿ ಪವಾಡ ಪುರುಷರೆಂದು ಬಿಂಬಿಸಿದರೆ ಈ ಆಧುನಿಕ ಕಾಲದಲ್ಲೂ ನಾವು ಇತಿಹಾಸವನ್ನು ತಪ್ಪಾಗಿ ಚಿತ್ರಿಸುತ್ತಿದ್ದೇವೆ ಎಂದಾಗುತ್ತದೆ. ಸಿದ್ದಗಂಗಾ ಶ್ರೀಗಳು ಬಹುದೊಡ್ಡ ಚಿಂತಕರಲ್ಲ, ಜ್ಞಾನಿಗಳಲ್ಲ, ಹೋರಾಟಗಾರರಲ್ಲ, ಬಸವಣ್ಣನವರಂತ ಕ್ರಾಂತಿಕಾರಿಗಳಲ್ಲ, ಸಿದ್ದೇಶ್ವರ ಸ್ವಾಮಿಗಳಂತ ಪ್ರವಚನಕಾರರು ಅಲ್ಲ, ಪವಾಡ ಪುರುಷರಂತು ಅಲ್ಲವೇ ಅಲ್ಲ. ಆದರೆ... ನಿರಂತರ - ನಿಶ್ಯಬ್ದ - ನಿಷ್ಕಲ್ಮಶ - ನಿರುಪದ್ರವಿಕಾಯಕ ಯೋಗಿ. ತಮ್ಮ ಪಾಲಿನ ಕೆಲಸವನ್ನು ತಲೆ ಬಗ್ಗಿಸಿ ನಿರ್ವಂಚನೆಯಿಂದ - ಪ್ರೀತಿಯಿಂದ ಮಾಡುತ್ತಾ ಹೋದರು. ಅದು ಅವರ ಬಹುದೊಡ್ಡ ಸಾಮರ್ಥ್ಯ ಮತ್ತು ಸಾಧನೆ. ಇದು ಭಾರತದ ಮತ್ತು ಎಲ್ಲಾ ದೇಶಗಳ ಸಮಾಜ ಸೇವಕರಿಗೆ ಸ್ಪೂರ್ತಿಯೂ ಹೌದು.

ಎಂದಿನಂತೆ ಮುಗ್ದತೆಯ ಜೊತೆ ಒಂದಷ್ಟು ಮೌಢ್ಯ, ಅಧಿಕಾರಸ್ತರ ಒಡನಾಟ, ಅನಿವಾರ್ಯವಾಗಿ ಕೆಲವು ಭ್ರಷ್ಟರ ಸಹವಾಸ ಇದ್ದರೂ ಅವು ಇಂದಿನ ಸಮಯದಲ್ಲಿ ನಿರ್ಲಕ್ಷಿಸಬಹುದಾದ ವಿಷಯಗಳು. ಪರಿಪೂರ್ಣತೆ ಮನುಷ್ಯ ಮಾತ್ರರಿಂದ ಸಾಧ್ಯವೇ ಇಲ್ಲ. ಇರಲಿ, ಇಂದಿನ ಭ್ರಷ್ಟಾಚಾರದ, ಜಾತಿವಾದಿ, ಕೋಮುವಾದಿ ಸನ್ನಿವೇಶದಲ್ಲಿ ನಾವು ಅವರ ಕಾಯಕದ ಒಂದು ಸಣ್ಣ ಅಂಶವನ್ನು ಪ್ರಾಮಾಣಿಕವಾಗಿ ಅಳವಡಿಸಿಕೊಳ್ಳುವ ಮುಖಾಂತರ ಅವರಿಗೆ ಗೌರವ ಸಲ್ಲಿಸಬಹುದು. ಅದೇ ನಾವು ಅವರಿಗೆ ಕೊಡುವ ಕಾಣಿಕೆಯೂ ಸಹ.

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

## ವಿಪರ್ಯಾಸ

ಸದಾ ಗ್ರಾಹಕರಿಂದ ತುಂಬಿ ಗಿಜಿಗುಡುತ್ತಿರುತ್ತದೆ ಆ ಕಾಫಿ ಶಾಪ್. ಅಂಗಡಿಯ ಮಾಲೀಕರು ಇಡೀ ದಿನ ಕಾರ್ಯನಿರತರಾಗಿರುತ್ತಿದ್ದರು. ಶನಿವಾರವಾದ್ದರಿಂದ ಅವರ ಅಂಗಡಿ ಇನ್ನಷ್ಟು ಜನದಟ್ಟಣೆಯಿಂದ ಕೂಡಿತ್ತು.

ಅಂದು ಬೆಳಗ್ಗಿನಿಂದಲೇ ಶುರುವಾಗಿದ್ದ ಅವರ ತಲೆನೋವು. ಸಂಜೆಯ ಹೊತ್ತಿಗೆ ವಿಪರೀತವೆನಿಸತೊಡಗಿತು ಇನ್ನು ಸಹಿಸಲಾಗದೆ, ಅವರು ಕೌಂಟರ್ ನೋಡಿಕೊಳ್ಳಲು ಸಿಬ್ಬಂದಿಯನ್ನು ಬಿಟ್ಟು ಅಂಗಡಿಯಿಂದ ಹೊರಬಂದರು.

ತಲೆನೋವಿಗಾಗಿ ಮಾತ್ರೆ ಖರೀದಿಸಲು ಔಷಧದ ಅಂಗಡಿಗೆ ಹೊರಟರು. ಮಾತ್ರೆ ನುಂಗಿದ ಸ್ವಲ್ಪ ಹೊತ್ತಿಗೆ ಸಮಾಧಾನವಾಯಿತು. ಕೆಲವೇ ನಿಮಿಷಗಳಲ್ಲಿ ಅವರಿಗೆ ಎನಿಸತೊಡಗಿತು.

ಅವರು ಅಲ್ಲಿಂದ ಹೊರ ಬರುತ್ತಾ ಅಲ್ಲಿದ್ದ ಸೇಲ್ಸ್‌ಗರ್ಲ್‌ಗೆ ಕೇಳಿದರು, ನಿಮ್ಮ ಎಲ್ಲಿ? ಅವರು ಇಂದು ಕ್ಯಾಶ್ ಕೌಂಟರ್‌ನಲ್ಲಿ ಕಾಣಿಸ್ತಾ ಇಲ್ಲ.

ಆಕೆ ಉತ್ತರಿಸಿದಳು, -- ಸರ್, ಅವರಿಗೆ ತಲೆನೋವು ಎಂದು ಕಾಫಿ ಕುಡಿಯಲು ನಿಮ್ಮ ಕಾಫಿ ಶಾಪ್‌ಗೆ ಹೋಗುತ್ತಿದ್ದೇನೆ ಎಂದು ಹೇಳಿ ಹೋದರು. ಒಂದು ಕಪ್ ಬಿಸಿ ಕಾಫಿ ಕುಡಿದರೆ ತಲೆನೋವಿನಿಂದ ಮುಕ್ತಿ ಸಿಗುತ್ತದೆ ಎನ್ನುತ್ತಿದ್ದರು.

ಓಹ್! ಸರಿ ಎಂದು ಇವನು ಅಲ್ಲಿಂದ ಹೊರಟನು.

ಹಿತ್ತಲ ಗಿಡ ಮದ್ದಲ್ಲ ಎನ್ನುವಂತೆ ನಮ್ಮಲ್ಲಿರುವ ಅನೇಕ ಸಮಸ್ಯೆಗಳಿಗೆ ನಮ್ಮಲ್ಲಿಯೇ ಪರಿಹಾರ ಸಮಾಧಾನಗಳನ್ನು ಇಟ್ಟುಕೊಂಡು ಇನ್ನೊಬರತ್ತ ದೃಷ್ಟಿ ಹಾಯಿಸುವ ವಿಶಿಷ್ಟ ಪ್ರಕರಣ ಇದು. ಎಷ್ಟು ವಿಚಿತ್ರ, ಆದರೆ ನಿಜ.

ಔಷಧದ ಅಂಗಡಿಯವ ಕಾಫಿ ಕುಡಿಯುವ ಮೂಲಕ ತಲೆನೋವನ್ನು ನಿವಾರಿಸಿ ಕೊಳ್ಳುತ್ತಾನೆ ಮತ್ತು ಕಾಫಿ ಶಾಪ್ ಮಾಲೀಕ ಮಾತ್ರೆ ಸೇವಿಸುವ ಮೂಲಕ ತಲೆನೋವು ನಿವಾರಿಸಿ ಕೊಳ್ಳುತ್ತಾನೆ. ಅದೇ ರೀತಿ, ನಮ್ಮಲ್ಲಿ ಅನೇಕರು ತಮ್ಮ ಅನೇಕ ಸಮಸ್ಯೆಗಳಿಗೆ ತಮ್ಮಲ್ಲೇ ಇರುವ ಸುಲಭವಾಗಿ ಸಿಗಬಹುದಾದ ಪರಿಹಾರಗಳನ್ನು ಮರೆತು ಬೇರೊಂದು ಕಡೆ ಹುಡುಕಲು ಪರಿತಪಿಸುತ್ತಾರೆ.

ಶಾಂತಿಯು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಯಾವಾಗಲೂ ನಮ್ಮೊಂದಿಗೆ ಇರುತ್ತದೆ ಎಂದು ನಾವು ಅರಿತುಕೊಳ್ಳದೇ ಹೋಗುವುದು ಎಂತಹ ವಿಪರ್ಯಾಸವಲ್ಲವೇ?

**– ಸಂಪಿಗೆ ವಾಸು,** ಬಳ್ಳಾರಿ



ಸಂಪಾದಕರ ಸದ್ಯಶೋಧನೆ

ಇತ್ತೀಚೆಗೆ ನನಗೆ ಬೆಂಗಳೂರಿನ ತರಗುಪೇಟೆಯಲ್ಲಿರುವ ರದ್ದಿ ಅಂಗಡಿಯಲ್ಲಿ ಖ್ಯಾತ ಫೋಟೋಗ್ರಾಫರ್ ರಘುಬೀರ್ ಸಿಂಗ್ ಅವರ ಎ ವೈ ಇನ್‌ಟು ಇಂಡಿಯಾ ಪುಸ್ತಕ ಸಿಕ್ಕಿತು. ಅದ್ಯಾವ ಪುಣ್ಯಾತ್ಮ ಈ ಪುಸ್ತಕವನ್ನು ತೂಕಕ್ಕೆ ಹಾಕಿದ್ದನೋ ಏನೋ? ಇಲ್ಲದಿದ್ದರೆ ಈ ಕೃತಿ ನನಗೆ ಸಿಗುತ್ತಿರಲಿಲ್ಲ.

ಇದು ಭಾರತದ ಆತ್ಮವನ್ನು ಅದರ ರಸ್ತೆಗಳ ಮೂಲಕ ತೋರಿಸುವ ಒಂದು ಅದ್ಭುತ ಕಲಾ ಕೃತಿ. ಭಾರತದ ಹತ್ತು ಅಗ್ರಗಣ್ಯ ಛಾಯಾಚಿತ್ರಗ್ರಾಹಕರಲ್ಲಿ ರಘುಬೀರ್ ಸಿಂಗ್ ನಿಸ್ಸಂದೇಹ ವಾಗಿ ಒಬ್ಬರು. ಅವರು ಭಾರತದ ಭೂದೃಶ್ಯಗಳು ಮತ್ತು ಜನರ ಬದುಕನ್ನು ದಾಖಲಿಸುವ ಡಾಕ್ಯುಮೆಂಟರಿ ಶೈಲಿಯ ಛಾಯಾಚಿತ್ರಗಳಿಗೆ ಜಗತ್ಪ್ರಸಿದ್ಧರಾಗಿದ್ದಾರೆ.

ಸ್ವಯಂ-ಕಲಿತ ಛಾಯಾಚಿತ್ರಗ್ರಾಹಕರಾದ ಇವರು ಭಾರತದಲ್ಲಿ ಕೆಲಸ ಮಾಡುತ್ತಾ ಪ್ಯಾರಿಸ್, ಲಂಡನ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ವಾಸವಾಗಿದ್ದರು. ತಮ್ಮ ವೃತ್ತಿ ಜೀವನದಲ್ಲಿ ಇವರು ನ್ಯಾಷನಲ್ ಜಿಯೋಗ್ರಾಫಿಕ್ ಮ್ಯಾಗಜಿನ್, ದ ನ್ಯೂಯಾರ್ಕ್ ಟೈಮ್ಸ್, ದ ನ್ಯೂಯಾರ್ಕರ್ ಮತ್ತು ಟೈಮ್ ನಿಯತಕಾಲಿಕೆಗಳಿಗಾಗಿ ಕೆಲಸ ಮಾಡಿದ್ದರು.

1970ರ ದಶಕದ ಆರಂಭದಲ್ಲಿ, ಬಣ್ಣದ ಛಾಯಾಗ್ರಹಣವು ಇನ್ನೂ ಅಷ್ಟಾಗಿ ಪ್ರಚಲಿತದಲ್ಲಿಲ್ಲದ ಕಾಲದ ಅದನ್ನು ಮರುಶೋಧಿಸಿದ ಮೊದಲ ಛಾಯಾಚಿತ್ರಗ್ರಾಹಕರಲ್ಲಿ ಇವರೂ ಒಬ್ಬರು. ಎ ವೈ ಇನ್‌ಟು ಇಂಡಿಯಾ ಅವರ ಕೊನೆಯ ಮತ್ತು ಅತ್ಯಂತ ಪ್ರಭಾವಶಾಲಿ ಕೃತಿಗಳಲ್ಲಿ ಒಂದು. ಈ ಪುಸ್ತಕದ ಕೇಂದ್ರಬಿಂದು ಭಾರತದ ಐಕಾನಿಕ್ ಕಾರು ಅಂಬಾಸಿಡರ್.

> ಸ್ವಯಂ-ಕಲಿತ ಛಾಯಾಚಿತ್ರಗ್ರಾಹಕರಾದ ಇವರು ಭಾರತದಲ್ಲಿ ಕೆಲಸ ಮಾಡುತ್ತಾ ಪ್ಯಾರಿಸ್, ಲಂಡನ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ವಾಸವಾಗಿದ್ದರು. ತಮ್ಮ ವೃತ್ತಿಜೀವನದಲ್ಲಿ ಇವರು ನ್ಯಾಷನಲ್ ಜಿಯೋಗ್ರಾಫಿಕ್ ಮ್ಯಾಗಜಿನ್, ದ ನ್ಯೂಯಾರ್ಕ್ ಟೈಮ್ಸ್, ದ ನ್ಯೂಯಾರ್ಕರ್ ಮತ್ತು ಟೈಮ್ ನಿಯತಕಾಲಿಕೆಗಳಿಗಾಗಿ ಕೆಲಸ ಮಾಡಿದ್ದರು.

## ಅಂಬಾಸಿಡರ್ ಕಾರಿನ ಮೂಲಕ ಭಾರತ

ಈ ಪುಸ್ತಕದಲ್ಲಿ ಅವರು ಅಂಬಾಸಿಡರ್ ಕಾರನ್ನು ಕೇವಲ ಒಂದು ವಾಹನವಾಗಿ ನೋಡಿಲ್ಲ.

ಬದಲಿಗೆ ಅದನ್ನು ಭಾರತವನ್ನು ನೋಡುವ ಒಂದು ಚೌಕಟ್ಟನ್ನಾಗಿ ಬಳಸಿ ಕೊಂಡಿದ್ದಾರೆ. ಸಿಂಗ್ ಅವರು ಕಾರಿನ ಒಳಗೆ ಕುಳಿತು, ಅದರ ಕಿಟಕಿಗಳ ಮೂಲಕ ಹೊರಗಿನ ಜಗತ್ತನ್ನು ಸೆರೆ ಹಿಡಿದಿದ್ದಾರೆ. ಇದು ನೋಡುಗರಿಗೆ ಕಾರಿನ ಒಳಗಿನಿಂದ ಭಾರತದ ಗದ್ದಲ, ಸೌಂದರ್ಯ ಮತ್ತು ಜನಜೀವನವನ್ನು ನೋಡುತ್ತಿರುವ ಅನುಭವ ನೀಡುತ್ತದೆ.

ಭಾರತದ ಬ್ರಿಟಿಷ್ ಪರಂಪರೆ ಮತ್ತು ಸ್ವತಂತ್ರ ಭಾರತದ ಆಧುನಿಕತೆಯ ನಡುವಿನ ಕೊಂಡಿಯಾಗಿ ಅಂಬಾಸಿಡರ್ ಇಲ್ಲಿ ಕಾಣಿಸಿಕೊಳ್ಳುತ್ತದೆ. ಪಾಶ್ಚಿಮಾತ್ಯ ಛಾಯಾಚಿತ್ರ ಗ್ರಾಹಕರು ಭಾರತವನ್ನು ಕೇವಲ ಬಡತನದ ಅಥವಾ ಕಪ್ಪು-ಬಿಳುಪಿನ ದೃಷ್ಟಿಕೋನದಲ್ಲಿ ನೋಡುವುದನ್ನು ಸಿಂಗ್ ವಿರೋಧಿಸಿದ್ದರು.



ಕಾರಿನ ಹೊಳೆಯುವ ಮೈಮೇಲೆ ಬೀಳುವ ಪ್ರತಿಬಿಂಬಗಳು ಮತ್ತು ಹೊರಗಿನ ದೃಶ್ಯಗಳ ಸಮ್ಮಿಲನವು ಒಂದು ರೀತಿಯ ಮಲ್ಟಿ-ಲೇಯರ್ ಚಿತ್ರಗಳನ್ನು ಸೃಷ್ಟಿಸುತ್ತದೆ. ಕಲ್ಕತ್ತಾದ ಮಳೆಬಿಲ್ಲು ಹಾದಿಗಳಿಂದ ಹಿಡಿದು, ರಾಜಸ್ಥಾನದ ಮರಳುಗಾಡುಗಳವರೆಗೆ, ಗಂಗಾ ನದಿಯ ದಡದಿಂದ ಮುಂಬೈನ ಗಿಜಿಗುಡುವ ರಸ್ತೆಗಳವರೆಗೆ, ಈ ಪುಸ್ತಕವು ಭಾರತದಾದ್ಯಂತದ ಪಯಣವನ್ನು ಒಳಗೊಂಡಿದೆ.

ಸಿಂಗ್ ಅವರು ನಿರ್ಣಾಯಕ ಕ್ಷಣ ತತ್ವವನ್ನು ಭಾರತೀಯ ಸಂದರ್ಭಕ್ಕೆ ತಕ್ಕಂತೆ ರೂಪಾಂತರಿಸಿದರು. ಕಾರಿನ ಕಿಟಕಿ, ಅದರ ಬಾಗಿಲಿನ ಹಿಡಿಕೆ ಅಥವಾ ವಿಂಡ್-ಶೀಲ್ಡ್ ಅನ್ನು ಅವರು ಫ್ರೇಮ್‌ಗಳಾಗಿ ಬಳಸುವ ರೀತಿ ಅದ್ಭುತವಾಗಿದೆ. ಇದು ಚಿತ್ರಕ್ಕೆ ಒಂದು ಆಳವನ್ನು ನೀಡುತ್ತದೆ.

ಇದು ನೋಡುಗರಿಗೆ ನಾನೂ ಆ ಕಾರಿನಲ್ಲಿ ಕುಳಿತು ಪ್ರಯಾಣಿಸುತ್ತಿದ್ದೇನೆ ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಈ ಪುಸ್ತಕದ ಶ್ರೇಷ್ಠತೆ ಇರುವುದು ಸಿಂಗ್ ಅವರು ಆರಿಸಿಕೊಂಡ ದೃಷ್ಟಿಕೋನದಲ್ಲಿ. ಅವರು ರಸ್ತೆಯ ಮೇಲೆ ನಿಂತು ಚಿತ್ರಗಳನ್ನು ತೆಗೆಯುವ ಬದಲು, ಹೆಚ್ಚಾಗಿ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತು ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ.

ಈ ಪುಸ್ತಕವು 1991ರ ದಶಕದ ಭಾರತದ ಬದಲಾವಣೆಯನ್ನು ದಾಖಲಿಸುತ್ತದೆ. ಇದು ಭಾರತೀಯ ಮಧ್ಯಮ ವರ್ಗದ ಕನಸುಗಳು ಮತ್ತು ರಸ್ತೆ ಬದಿಯ ಸಾಮಾನ್ಯ ಜನರ ವಾಸ್ತವದ ನಡುವಿನ ಸಂಘರ್ಷ ಮತ್ತು ಸಾಮರಸ್ಯವನ್ನು ಎತ್ತಿ ತೋರಿಸುತ್ತದೆ.

ಅಂಬಾಸಿಡರ್ ಕಾರನ್ನು ಕನ್ನಡಿಯಂತೆ ಬಳಸಿಕೊಂಡು ಅವರು ದೇಶದ ವೈವಿಧ್ಯತೆ, ಗೊಂದಲ ಮತ್ತು ಅದಮ್ಯ ಚೇತನವನ್ನು ಸೆರೆಹಿಡಿದಿದ್ದಾರೆ. ಇದು ಕೇವಲ ಫೋಟೋಗ್ರಫಿ ಆಸಕ್ತರಿಗಷ್ಟೇ ಅಲ್ಲ, ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಬಯಸುವವರಿಗೂ ಒಂದು ಪಠ್ಯಪುಸ್ತಕದಂತಿದೆ.

ಭಾರತವನ್ನು ಅರ್ಥಮಾಡಿಕೊಳ್ಳಲು ಅದರ ರಸ್ತೆಗಳೇ ದಾರಿ ಎಂಬ ಸತ್ಯವನ್ನು ಈ ಪುಸ್ತಕವು ನಮಗೆ ಮನದಟ್ಟು ಮಾಡಿಕೊಡುತ್ತದೆ. ರಘುಬೀರ್ ಸಿಂಗ್ ಈ ಮೊದಲು ಗಂಗಾ ನದಿಯ ಮೇಲೆ ಪುಸ್ತಕ ಮಾಡಿದ್ದರು.

ಅವರು ನದಿಯನ್ನು ಭಾರತದ ಸಂಸ್ಕೃತಿಯ ವಾಹಕ ಎಂದು ಕರೆದಿದ್ದರು. ಆದರೆ ಈ ಪುಸ್ತಕದಲ್ಲಿ ಅವರು ಅಂಬಾಸಿಡರ್ ಕಾರನ್ನೇ ಆಧುನಿಕ ಭಾರತದ ಗಂಗೆ ಎಂದು ಪರಿಭಾವಿಸುತ್ತಾರೆ.

**– ವಿಶ್ವೇಶ್ವರ ಭಟ್**

## ನಾಳೆ ದ್ವಿತೀಯ ಪಿಯುಸಿ ಫಲಿತಾಂಶ

• ಪ್ರಜೋದಯ ವರದಿ

**ಬೆಂಗಳೂರು:** ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶಕ್ಕೆ ಪರೀಕ್ಷಾ ಮಂಡಳಿ ಅಂತಿಮ ದಿನಾಂಕವನ್ನು ಪ್ರಕಟಿಸಿದೆ.

ಏಪ್ರಿಲ್ 9 ರಂದು ಗುರುವಾರ ಬೆಳಿಗ್ಗೆ ಫಲಿತಾಂಶ ಪ್ರಕಟವಾಗಲಿದೆ. ಮಂಗಳವಾರ ಫಲಿತಾಂಶ ಪ್ರಕಟವಾಗಬೇಕಿತ್ತು. ಕಾರಣವೇ ಇಲ್ಲದೇ ಬೋರ್ಡ್ ಫಲಿತಾಂಶ ಪ್ರಕಟ ಮುಂದೂಡಿಕೆ ಮಾಡಿತ್ತು. ಈ ಬೆನ್ನಲ್ಲೇ ಫಲಿತಾಂಶ ಪ್ರಕಟಿಸಲು ಅಂತಿಮ ದಿನಾಂಕವನ್ನೂ ಬಿಡುಗಡೆ ಮಾಡಿದೆ.

ಏಪ್ರಿಲ್ 9ರ ಬೆಳಗ್ಗೆ ಸಚಿವರು ನಡೆಸುವ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ಪ್ರಕಟವಾಗಲಿದೆ. ಮಧ್ಯಾಹ್ನದ ನಂತರ ಇಲಾಖೆ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ ಎಂದು ಎಕ್ಸಾಂ ಬೋರ್ಡ್‌ನ ಮೂಲಗಳು ಮಾಹಿತಿ ನೀಡಿದೆ.

ಫೆ.28 ರಿಂದ ಮಾರ್ಚ್ 17ರ ವರೆಗೂ ಪರೀಕ್ಷೆ ನಡೆದಿತ್ತು.

# ತಂತ್ರಜ್ಞಾನವನ್ನು ಕಲಾತ್ಮಕವಾಗಿ ದುಡಿಸಿಕೊಳ್ಳಿ

• ಪ್ರಜೋದಯ ವರದಿ



**ಹಾಸನ:** ಜಗತ್ತನ್ನು ಗಮನಿಸುವ ಅರಿವು ನಮ್ಮನ್ನು ಹೊಸ ಆಲೋಚನೆ, ಹೊಸ ಚಿಂತನೆಗಳಿಗೆ ತೆರೆಯುತ್ತದೆ. ಛಾಯಾಚಿತ್ರ ಪತ್ರಕರ್ತರಾಗಿ ಸುತ್ತಲಿನ ವಿದ್ಯಮಾನಗಳನ್ನು ಅನುಭವಿಸಿದಾಗ ಮಾತ್ರ ನೈಜ ಮತ್ತು ವಸ್ತುನಿಷ್ಠ ಸುದ್ದಿಗಳನ್ನು ತಲುಪಿಸಲು ಸಾಧ್ಯ ಎಂದು ಲೇಖಕ ಹೆಚ್.ಆರ್.ನವೀನ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ದಿ ಆರ್ಟ್ ಅಂಡ್ ಸೈನ್ಸ್ ಆಫ್ ಫೋಟೋಗ್ರಫಿ ಒಂದು ದಿನದ ಕೌಶಲ್ಯಾಭಿವೃದ್ಧಿ ಕಾರ್ಯಾಗಾರದಲ್ಲಿ ಅವರು ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಕ್ಯಾಮರಾ ಮತ್ತು ಛಾಯಾಗ್ರಹಣದ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಿದರು. ತಂತ್ರಜ್ಞಾನವನ್ನು ಕಲಾತ್ಮಕ ರೀತಿಯಲ್ಲಿ ದುಡಿಸಿಕೊಳ್ಳುವುದರಿಂದ ಹೆಚ್ಚೆಚ್ಚು ಕ್ರಿಯಾಶೀಲರಾಗುತ್ತೇವೆ. ತೆರೆದ ಅವಕಾಶಗಳು ನಮ್ಮ ವಿಶ್ವಾಸವನ್ನು ಹೆಚ್ಚಿಸುತ್ತವೆಂದು ಹೇಳಿದರು.

ಪ್ರಾಂಶುಪಾಲ ಡಿ.ಎಸ್.ರಾಜು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪತ್ರಕರ್ತರು ಪ್ರಚಲಿತ ವಿದ್ಯಮಾನಗಳ ನಿರ್ವಾಹಕರು. ಜಗತ್ತಿನಾದ್ಯಂತ ಕ್ಷಣ ಕ್ಷಣ ಮಾಹಿತಿಗಳನ್ನು ವಿವರಿಸುವ ಹಂತದಲ್ಲಿ ಛಾಯಾಚಿತ್ರ ಪತ್ರಕರ್ತರ ಪಾತ್ರ ದೊಡ್ಡದಿದೆ. ವಿದ್ಯಾರ್ಥಿ ದೆಸೆಯಲ್ಲಿಯೇ ಕೌಶಲ್ಯ ಕಾರ್ಯಾಗಾರಗಳ ಮೂಲಕ ನೈತಿಕತೆ ಮತ್ತು ಸೃಜನಶೀಲತೆ ಕಲಿಸುವ ಕೆಲಸವಾಗಬೇಕು ಎಂದರು.

ಕಾಲೇಜಿನ ಶೈಕ್ಷಣಿಕ ಡೀನ್ ಎಂ.ಕೆ.ಹರೀಶ್ ಅವರು ಮಾತನಾಡಿ, ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ಉತ್ತಮ ಪತ್ರಿಕೋದ್ಯಮಿಯನ್ನು ರೂಪಿಸುತ್ತದೆ. ಮಾನವೀಯತೆ ಮತ್ತು ಪ್ರೇರಣೆಯಿಂದ ಉಂಟಾದ ಅಕ್ಷರ ಮತ್ತು ಚಿತ್ರಗಳು ಉತ್ತಮ ಸಮಾಜವನ್ನು ಕಟ್ಟಿಕೊಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಆ ನಿಟ್ಟಿನಲ್ಲಿ ತಯಾರಾಗಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಇಳಿಯುವಂತಾಗಬೇಕು ಎಂದು ಅವರು ಹೇಳಿದರು.

ವಿಭಾಗದ ಮುಖ್ಯಸ್ಥರಾದ ಡಾ. ಪ್ರಮೀಳಾ ಅವರು ಮಾತನಾಡಿ, ಶೈಕ್ಷಣಿಕ ಜ್ಞಾನವನ್ನು ಸಮರ್ಪಕವಾಗಿ ಬದುಕಿಗೆ ಅನ್ವಯಿಸಲು ಕೌಶಲ್ಯ ಅಗತ್ಯ. ಅದರಲ್ಲೂ ಪತ್ರಿಕೋದ್ಯಮವು ಸೃಜನಶೀಲತೆಯನ್ನು ನಿರೀಕ್ಷಿಸುವ ಕ್ಷೇತ್ರ. ಪ್ರಾಯೋಗಿಕ ಕಲಿಕೆಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಛಾಯಾಚಿತ್ರ ಕಾರ್ಯಾಗಾರವನ್ನು ಆಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲೂ ಪ್ರಾಯೋಗಿಕ ಕಲಿಕೆಗೆ ಹೆಚ್ಚು ಒತ್ತು ಕೊಡಬೇಕೆಂದು ಹೇಳಿದರು.

ಪತ್ರಾಂಕಿತ ವ್ಯವಸ್ಥಾಪಕ ಸತ್ಯಮೂರ್ತಿ ಅವರು ಮಾತನಾಡಿ, ಸಮಾಜ ದಿಕ್ಕು ತಪ್ಪದಂತೆ ನಿರ್ವಹಿಸುವಲ್ಲಿ ಪತ್ರಿಕೋದ್ಯಮದ ಜವಾಬ್ದಾರಿ ಹೆಚ್ಚು. ಮುಖ್ಯವಾಗಿ ಛಾಯಾಚಿತ್ರ ಪತ್ರಿಕೋದ್ಯಮದಲ್ಲಿ ಅಂತಹ ಎಚ್ಚರಿಕೆಯ ಅಗತ್ಯವಿದೆ ಎಂದರು.

ಪತ್ರಿಕೋದ್ಯಮ ವಿಭಾಗದ ಡಾ.ಭವ್ಯ, ಎನ್.ಜೆ.ಸಚಿನ್, ಎ.ಜಿ.ಸತೀಶ್ ಹಾಗೂ ವಿವಿಧ ವಿಭಾಗದ ಉಪನ್ಯಾಸಕರು ಇನ್ನಿತರರು ಉಪಸ್ಥಿತರಿದ್ದರು.

# ಅಭಿವೃದ್ಧಿ ಕಾರ್ಯಗಳಿಗೆ ಗೋಮಾಳದ ಜಾಗ ಬಳಕೆಗೆ ಒತ್ತಾಯ

## ಅತಿಕ್ರಮಣಕ್ಕೆ ಗ್ರಾಮದ ಕೆಲವರಿಂದ ಹುನ್ನಾರ: ಆರೋಪ

• ಪ್ರಜೋದಯ ವರದಿ




**ಅರಕಲಗೂಡು:** ತಾಲ್ಲೂಕಿನ ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದ ಸರ್ವೆ ನಂ. 94ರ ಗೋಮಾಳದ ಜಾಗವನ್ನು ಊರಿನ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಡಬೇಕು ಎಂದು ಗ್ರಾಪಂ ಮಾಜಿ ಸದಸ್ಯ ಎಂ.ಬಿ.ಸ್ವಾಮಿ ಅವರು ಒತ್ತಾಯಿಸಿದರು.

ಗ್ರಾಮದ ಸರ್ವೆ ನಂ.94ರಲ್ಲಿ 174 ಎಕರೆ ಗೋಮಾಳ ಇದ್ದು ಈ ಪೈಕಿ ಸರ್ಕಾರಿ ಪ್ರೌಢಶಾಲೆ ಹಾಗೂ ಕೆಲವರು ಮನೆ ನಿರ್ಮಿಸಿಕೊಂಡಿದ್ದು ಭೂಮಿ ಇಲ್ಲದ ಗ್ರಾಮಸ್ಥರು ಬಗರ್ ಹುಕುಂ ಯೋಜನೆಯಡಿ ಅರ್ಜಿ ಸಲ್ಲಿಸಿ ಸಾಗುವಳಿ ಕೈಗೊಂಡಿದ್ದಾರೆ. ಊರಿನ ಪಕ್ಕ ಇನ್ನು ಎರಡು ಎಕರೆ ಗೋಮಾಳ ಖಾಲಿ ಉಳಿದಿದೆ. ಈ ಜಾಗವನ್ನು ಕೆಲವರು ಅತಿಕ್ರಮಿಸಲು ಮುಂದಾಗಿರುವುದು ಸರಿಯಲ್ಲ. ಈ ಜಾಗವನ್ನು ಊರಿನ ಅಭಿವೃದ್ಧಿ ಕಾರ್ಯಗಳಿಗೆ ಕಾಯ್ದಿರಿಸಬೇಕು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಗೋಮಾಳದಲ್ಲಿ ನಿರ್ಮಿಸಿಕೊಂಡಿದ್ದ ಶೆಡ್‌ಗಳನ್ನು ಕಂದಾಯ ಇಲಾಖೆ ಈಗಾಗಲೇ ತೆರವುಗೊಳಿಸಿದೆ. ಮತ್ತೆ ಈ ಜಾಗದಲ್ಲಿ ಅತಿಕ್ರಮ ಆಗದಂತೆ ತಾಲೂಕು ಆಡಳಿತ ನಿಗಾ ವಹಿಸಬೇಕು ಎಂದು ಅವರು ಮನವಿ ಮಾಡಿದರು.

ಮುಖಂಡ ಅಬ್ದುಲ್ ಗಫಾರ್ ಸಾಬ್ ಮಾತನಾಡಿ, ಈಗಾಗಲೇ ಊರಿನ ಕೆಲವರು ಗೋಮಾಳದ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದಾರೆ. ಉಳಿದಿರುವ ಎರಡು ಎಕರೆ ಜಾಗವನ್ನು ಉಳಿಸಿಕೊಳ್ಳಬೇಕಿದೆ. ಬಡವರನ್ನು ಗುರುತಿಸಿ ಬೇರೆ ಕಡೆ ನಿವೇಶನ ಒದಗಿಸುವುದಾಗಿ ಶಾಸಕರು ಊರಿನಲ್ಲಿ ಇತ್ತೀಚೆಗೆ ಶಾಂತಿಸಭೆ ನಡೆಸಿ ಭರವಸೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಕೂಡಲೇ ಇದರ ಬಗ್ಗೆ ಗಮನಹರಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ರಾ.ಪಂ. ಉಪಾಧ್ಯಕ್ಷ ನಜೀರ್ ಸಾಬ್, ಮುಖಂಡರಾದ ತೇಜೇಶ್ವರ, ವೀರಪ್ಪ, ಮಹೇಶ್ ಗೋಷ್ಠಿಯಲ್ಲಿ ಹಾಜರಿದ್ದರು.



**ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಂಡಿಗನಹಳ್ಳಿ ಹೋಬಳಿ ಎ.ಕಾಳೇನಹಳ್ಳಿ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಹಾಗು ಚರಂಡಿ ನಿರ್ಮಾಣ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಪಕ್ಷದ ಕಾರ್ಯಕರ್ತರು, ಮುಖಂಡರು, ಗ್ರಾಮಸ್ಥರು ಹಾಜರಿದ್ದರು.**

## ಪಾಕಿಸ್ತಾನದಲ್ಲಿ ಲಾಕ್ ಡೌನ್ ಘೋಷಣೆ

ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಭಾರೀ ತೈಲ ಬಿಕ್ಕಟ್ಟನ್ನು ಎದುರಿಸುತ್ತಿರುವ ಪಾಕಿಸ್ತಾನ, ದಾರಿ ಕಾಣದೇ ಮಂಕಾಗಿದೆ. ಈಗಾಗಲೇ ತೈಲ ಕೊರತೆಯ ಕಾರಣಕ್ಕೆ ಗಣರಾಜ್ಯೋತ್ಸವ ಪರೇಡ್ ರದ್ದು ಮಾಡಿದ್ದ ಪಾಕಿಸ್ತಾನ, ಈಗ ದೇಶಾದ್ಯಂತರ ಭಾಗಶಃ ಲಾಕ್ ಡೌನ್ ನಿಯಮ ಜಾರಿಗೆ ತಂದಿದೆ.

ಸಿಂಧ್ ಪ್ರಾಂತ್ಯವನ್ನು ಹೊರತುಪಡಿಸಿ ಇಡೀ ಪಾಕಿಸ್ತಾನಕ್ಕೆ ಬಾಗಶಃ ಲಾಕ್‌ಡೌನ್ ನಿಯಮ ಜಾರಿಗೊಳಿಸಲಾಗಿದ್ದು, ರಾತ್ರಿ 8 ಗಂಟೆ ಮತ್ತು 10 ಗಂಟೆ ಸಮಯದಲ್ಲಿ ಮದುವೆ ಸಭಾಂಗಣ, ಮಾರುಕಟ್ಟೆಗಳನ್ನು ಬಂದ್ ಮಾಡುವಂತೆ ನಿರ್ದೇಶನ ನೀಡಿದೆ.

ಪ್ರಧಾನಮಂತ್ರಿ ಶೆಹಬಾಜ್ ಷರೀಫ್ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯ ನಂತರ, ಭಾಗಶಃ ಲಾಕ್‌ಡೌನ್ ನಿರ್ಧಾರವನ್ನು ಪ್ರಕಟಿಸಲಾಗಿದೆ.

# ಮಕ್ಕಳ ಕಳ್ಳ ಸಾಗಾಣಿಕೆ ತಡೆಗೆ ಪ್ರತಿಯೊಬ್ಬರೂ ಸಹಕರಿಸಬೇಕು

• ಪ್ರಜೋದಯ ವರದಿ



**ಹಾಸನ:** ದೇಶದಲ್ಲಿ ದಿನನಿತ್ಯ ಮಕ್ಕಳ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟುವ ಕೆಲಸ ಪ್ರತಿಯೊಬ್ಬ ನಾಗರೀಕರಿಂದ ಆಗಬೇಕಿದೆ ಎಂದು ಎಂ.ಜಿ.ರಸ್ತೆ ಮಹಿಳಾ ಕಾಲೇಜಿನ ಸಮಾಜಶಾಸ್ತ್ರ ಸಹ ಪ್ರಾಧ್ಯಾಪಕ ಡಾ. ಭಾಷ ಕೆ. ಅಭಿಪ್ರಾಯಪಟ್ಟರು.

ನಗರದ ಆರ್.ಸಿ. ರಸ್ತೆ, ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ. ಘಟಕ ಹಾಗೂ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಮಕ್ಕಳು ಮತ್ತು ಕಳ್ಳಸಾಗಣೆ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ದಿನಕ್ಕೆ ಸುಮಾರು 20 ರಿಂದ 30 ಮಕ್ಕಳು ಕಾಣೆಯಾಗುತ್ತಿರುವ ಬಗ್ಗೆ ಈಗಾಗಲೇ ವರದಿಯಾಗುತ್ತಿದೆ. ಕಳ್ಳ ಸಾಗಾಣಿಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದು ಸುಮಾರು 12 ಲಕ್ಷ ಕೋಟಿ ರೂ.ಗಳ ಅಕ್ರಮ ವ್ಯವಹಾರ ಇದರಿಂದ ನಡೆಯುತ್ತಿದೆ. ಮಕ್ಕಳನ್ನು ವಿವಿಧ ರೀತಿಯಲ್ಲಿ ದುರುಪಯೋಗಪಡಿಸಲಾಗುತ್ತಿದೆ ಎಂದರು.

ವಿಶೇಷವಾಗಿ ಕಾಫಿ ತೋಟಗಳು ಕ್ರಷರ್‌ಗಳು ಇಟ್ಟಿಗೆ ಕಾರ್ಖಾನೆಗಳಲ್ಲಿ ಮಕ್ಕಳನ್ನು ಬಲವಂತವಾಗಿ ಕೆಲಸ ಮಾಡಿಸಲಾಗುತ್ತಿದೆ, ಇನ್ನು ಕೆಲವು ಮಕ್ಕಳನ್ನು ಭಿಕ್ಷಾಟನೆಗೆ ತಳ್ಳಲಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಫೇಕ್ ಐಡಿ (ನಕಲಿ ಗುರುತು ಪತ್ರ) ಬಳಸಿ ವಂಚನೆ ಮಾಡಲಾಗುತ್ತಿದೆ. ಅದರಲ್ಲೂ ಈಗಿನ ಮಕ್ಕಳು ಮಾದಕ ವಸ್ತುವಿಗೆ ಬಲಿಯಾಗುತ್ತಿರುವುದು ಸಮಾಜಕ್ಕೆ ದೊಡ್ಡ ಅಪಾಯ. ಮಹಿಳೆಯರು ಯಾರ ಮೇಲೂ ಅವಲಂಬಿತರಾಗಬಾರದು, ಸ್ವಾವಲಂಬನೆಯಿಂದ ಬದುಕಬೇಕು ಶಿಕ್ಷಣ ಮತ್ತು ಕೌಶಲ್ಯಗಳಿಂದ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳಬೇಕು ಮೊದಲಿಗೆ ನಮ್ಮನ್ನು ನಾವೇ ರಕ್ಷಣೆ ಮಾಡಿಕೊಳ್ಳಬೇಕು. ಅನಗತ್ಯವಾಗಿ ಅಲ್ಲಿ ಇಲ್ಲಿ ಹೋಗುವ ಹೋಗಬಾರದು ಎಂದು ತಮ್ಮ ವಿಶೇಷ ಉಪನ್ಯಾಸವನ್ನು ಮುಗಿಸಿದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳ ಕಳ್ಳ ಸಾಗಾಣಿಕೆ ಮತ್ತು ಅಂಗಾಂಗಗಳ ಅಕ್ರಮ ವ್ಯವಹಾರಗಳು ಹೆಚ್ಚಾಗುತ್ತಿರುವುದು ಆತಂಕಕಾರಿಯಾಗಿದೆ. ವಿಶೇಷವಾಗಿ ಮಹಾನಗರಗಳಲ್ಲಿ ಜನಸಂದಣಿ ಮತ್ತು ಅವಸರದ ಜೀವನದ ನಡುವೆ ಕೆಲವರು ಈ ರೀತಿಯ ಅಕ್ರಮ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಅಜ್ಞಾನ ಮತ್ತು ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ಮಕ್ಕಳನ್ನು ಹಾಗೂ ಸಾಮಾನ್ಯ ಜನರನ್ನು ತಪ್ಪು ಮಾರ್ಗಕ್ಕೆ ಕರೆದುಕೊಳ್ಳುತ್ತಾರೆ. ಇದು ಕೇವಲ ಕಾನೂನುಬಾಹಿರವಲ್ಲ ಮಾನವೀಯತೆಯ ವಿರುದ್ಧವಾಗಿದೆ. ಮಕ್ಕಳ ಸಾಗಾಣಿಕೆಯನ್ನು ತಪ್ಪಿಸಲು ಸಮಾಜದ ಪ್ರತಿಯೊಬ್ಬರು ಜವಾಬ್ದಾರರಾಗಬೇಕು, ನಾವು ನಮ್ಮ ಸುತ್ತಮುತ್ತ ಇರುವವರಿಗೆ ಜಾಗೃತಿ ಮೂಡಿಸಬೇಕು. ಅನುಮಾನಾಸ್ಪದ ಚಟುವಟಿಕೆಗಳನ್ನು ಕಂಡರೆ ಮೌನವಾಗಿರಬಾರದು. ತಕ್ಷಣವೇ ಪೊಲೀಸ್ ಅಥವಾ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಅದರ ಜೊತೆಗೆ ಸಮಾಜಕ್ಕೆ ಮಾಹಿತಿಯನ್ನು ನೀಡಬೇಕು ಎಂದರು.

ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಆರ್. ಸುರೇಶ್‌ಕುಮಾರ್, ಸಹ ಪ್ರಾಧ್ಯಾಪಕ ವೆಂಕಟೇಶ್ ಎನ್., ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್‌ಕುಮಾರ್ ಹಾಜರಿದ್ದರು.

# ಮರೆಯಲಾಗದ ಹೊಡೆತ ಕಾದಿದೆ; ಅಮೆರಿಕಕ್ಕೆ ಇರಾನ್ ತಿರುಗೇಟು

• ಪ್ರಜೋದಯ ವರದಿ



**ಟೆಹ್ರಾನ್:** ಮಂಗಳವಾರ ರಾತ್ರಿ ಇರಾನ್‌ನ ನಾಗರಿಕತೆ ಸಂಪೂರ್ಣವಾಗಿ ನಾಶವಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಸ್ವಲ್ಪ ಸಮಯದ ನಂತರ ಅದಕ್ಕೆ ಇರಾನ್ ಪ್ರತ್ಯುತ್ತರ ನೀಡಿದೆ. ನಾವು ನಿಮ್ಮ ಬೆದರಿಕೆಗೆ ಹೆದರುವುದಿಲ್ಲ, ನಮ್ಮ ದಾಳಿಗಳನ್ನು ದ್ವಿಗುಣಗೊಳಿಸುತ್ತೇವೆ, ನಾವೆಂದೂ ಹಿಂಜರಿಯುವುದಿಲ್ಲ ಎಂದು ಹೇಳಿದೆ. ಟ್ರಂಪ್ ಅವರ ಇತ್ತೀಚಿನ ಬೆದರಿಕೆಗಳ ನಂತರ ಎಲ್ಲಾ ರಾಜತಾಂತ್ರಿಕ ಮಾರ್ಗಗಳು ಮತ್ತು ಪರೋಕ್ಷ ಮಾತುಕತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಇರಾನ್ ಸ್ಪಷ್ಟಪಡಿಸಿದೆ

''ಅಮೆರಿಕದ ವಿರುದ್ಧ ಫತಾಹ್ ಮತ್ತು ಖೈಬರ್ ಶೇಕನ್ ಕ್ಷಿಪಣಿಗಳಿಗಾಗಿ ಹೊಸ ಉಡಾವಣಾ ವೇದಿಕೆಗಳೊಂದಿಗೆ ನಾವು ನಮ್ಮ ದಾಳಿಗಳನ್ನು ದ್ವಿಗುಣಗೊಳಿಸುತ್ತೇವೆ'' ಎಂದು ಐಆರ್‌ಜಿಸಿ ಏರೋಸ್ಪೇಸ್ ಫೋರ್ಸ್ ಕಮಾಂಡರ್ ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿರುವ ಇರಾನಿನ ರಾಯಭಾರ ಕಚೇರಿಯು ಎಕ್ಸ್ ನಲ್ಲಿ ಟ್ರಂಪ್ ಹೇಳಿಕೆಗೆ ಪ್ರತಿಕ್ರಿಯಿಸಿದ್ದು, ''ನೀವು ಮತ್ತು ನಿಮ್ಮ ಮಿತ್ರರಾಷ್ಟ್ರಗಳು ಇರಾನ್‌ನ ಪ್ರಾಚೀನ ನಾಗರಿಕತೆಯಿಂದ ಮರೆಯಲಾಗದ ಹೊಡೆತವನ್ನು ಅನುಭವಿಸುವಿರಿ'' ಎಂದು ಹೇಳಿದೆ. ಫೆಬ್ರವರಿಯಲ್ಲಿ ಯುಎಸ್-ಇಸ್ರೇಲಿ ದಾಳಿಯ ಸಮಯದಲ್ಲಿ ಮಿನಾಬ್‌ನಲ್ಲಿ ಕೊಲ್ಲಲ್ಪಟ್ಟ ಮಗುವಿನ ದುಃಖಿತ ತಾಯಿಯ ಚಿತ್ರವನ್ನು ಸಹ ರಾಯಭಾರ ಕಚೇರಿ ಹಂಚಿಕೊಂಡಿದೆ. ಇದು ಅಯತೊಲ್ಲಾ ಅಲಿ ಖಮೇನಿಯವರ ಹತ್ಯೆಯ ನಂತರ ಮತ್ತು ಪ್ರಾಥಮಿಕ ಶಾಲೆಯ ಮೇಲೆ ಕ್ಷಿಪಣಿ ದಾಳಿಗಳನ್ನು ಗುರಿಯಾಗಿಸಿಕೊಂಡ ದಾಳಿಯಾಗಿತ್ತು. ಈ ದಾಳಿಯಲ್ಲಿ ಸುಮಾರು 170 ಶಾಲಾ ಹುಡುಗಿಯರು ಸಾವನ್ನಪ್ಪಿದ್ದರು. ''ಈ ದುಃಖ, ಈ ಕೋಪ, ಈ ಮುಖವನ್ನು ನೆನಪಿಟ್ಟುಕೊಳ್ಳಿ. ನಾವು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ರಾಯಭಾರ ಕಚೇರಿಯು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

''ಅಮೆರಿಕನ್ ಭಯೋತ್ಪಾದಕ ಸೇನೆಯು ಕೆಂಪು ರೇಖೆಗಳನ್ನು ದಾಟಿದರೆ ನಮ್ಮ ಪ್ರತಿಕ್ರಿಯೆಯು ಬೇರೆಯದೇ ರೀತಿ ಇರುತ್ತದೆ. ನಾವು ನಾಗರಿಕ ಸೌಲಭ್ಯಗಳ ಮೇಲಿನ ಹೇಯ ಆಕ್ರಮಣಗಳ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ಹಿಂಜರಿಯುವುದಿಲ್ಲ'' ಎಂದು ತಿಳಿಸಿದೆ.

ಇಸ್ಲಾಮಿಕ್ ಗಣರಾಜ್ಯವು ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವುದನ್ನು ಒಳಗೊಂಡ ಒಪ್ಪಂದಕ್ಕೆ ಇರಾನ್ ಒಪ್ಪಿಕೊಳ್ಳಲು ನೀಡಿದ ಇತ್ತೀಚಿನ ಗಡುವನ್ನು ಇರಾನ್ ಪೂರೈಸದಿದ್ದರೆ ''ಇಡೀ ನಾಗರಿಕತೆ ಇಂದು ರಾತ್ರಿ ನಾಶವಾಗುತ್ತದೆ'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ.

ಇರಾನ್‌ನಲ್ಲಿ ಎರಡು ಸೇತುವೆಗಳು ಮತ್ತು ರೈಲು ನಿಲ್ದಾಣದ ಮೇಲೆ ಅಮೆರಿಕದ ವಾಯುದಾಳಿಗಳು ನಡೆದಿವೆ.

# ನಕಲಿ ವೈದ್ಯರ ಕ್ಲಿನಿಕ್‌ಗಳಿಗೆ ಬೀಗ: ಪ್ರಶಂಸೆ

• ಪ್ರಜೋದಯ ವರದಿ







**ಅರಕಲಗೂಡು:** ನಕಲಿ ವೈದ್ಯರ ವಿರುದ್ಧ ಸರ್ಕಾರ ಕ್ರಮಕ್ಕೆ ಮುಂದಾದ ಹಿನ್ನೆಲೆಯಲ್ಲಿ ತಾಲ್ಲೂಕಿನ ಮಲ್ಲಿಪಟ್ಟಣದ ಲಕ್ಷ್ಮಣ್ ಕ್ಲಿನಿಕ್ ಮತ್ತು ಪಟ್ಟಣದ ಜಯಲಕ್ಷ್ಮಿ ಕ್ಲಿನಿಕ್ ಮೇಲೆ ತಾಲ್ಲೂಕು ಆರೋಗ್ಯಾಧಿಕಾರಿ ದಾಳಿ ನಡೆಸಿ ಬೀಗಮುದ್ರೆ ಹಾಕಿಸಿದ್ದು, ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮಲ್ಲಿಪಟ್ಟಣದ ನಕಲಿ ವೈದ್ಯ ಡಾ. ವಿಶ್ವನಾಥ್ ಎಂಬಾತ ಹಲವಾರು ವರ್ಷಗಳಿಂದ ಲಕ್ಷ್ಮಣ್ ಹೆಸರಿನಲ್ಲಿ ಕ್ಲಿನಿಕ್ ತೆರೆದು ಮೆಡಿಕಲ್ ದಂದೆ ನಡೆಸುತ್ತಿದ್ದು ನಿತ್ಯ ನೂರಾರು ಮಂದಿ ರೋಗಿಗಳಿಗೆ ನಕಲಿ ಔಷಧಿ ನೀಡಿ ವಂಚಿಸುತ್ತಿದ್ದ. ಸರ್ಕಾರ ನಕಲಿ ವೈದ್ಯರಿಂದ ರೋಗಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಸಾವು ನೋವಿಗೆ ಗುರಿಯಾಗುತ್ತಿದ್ದ ಕಾರಣ ಅಂತಹ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿತ್ತು. ಎಚ್ಚೆತ್ತ ತಾಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಅವರು ಮಲ್ಲಿಪಟ್ಟಣದ ಲಕ್ಷಣ್ ಕ್ಲಿನಿಕ್ ಮೇಲೆ ದಾಳಿ ನಡೆಸಿ ಬೀಗ ಮುದ್ರೆ ಹಾಕಿದ್ದಾರೆ.

ಸರ್ಕಾರ ನಕಲಿ ವೈದ್ಯರ ವಿರುದ್ಧ ಕ್ರಮ ಜರುಗಿಸುವಂತೆ ಆದೇಶ ನೀಡಿದ ಹಿನ್ನಲೆಯಲ್ಲಿ ಮಲ್ಲಿಪಟ್ಟಣದ ಲಕ್ಷ್ಮಣ್ ಕ್ಲಿನಿಕ್‌ಗೆ ಬೀಗ ಜಡಿದು ನಕಲಿ ವೈದ್ಯ ಡಾ. ವಿಶ್ವನಾಥ್ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ನಕಲಿ ವೈದ್ಯರ ಹಾವಳಿಗೆ ಕಡಿವಾಣ ಹಾಕಲು ಮುಂದಾಗಿರುವ ಸರ್ಕಾರದ ಸೂಚನೆ ಸಮರ್ಪಕವಾಗಿ ಪಾಲನೆಯಾಗುವುದೇ ಎಂಬುದು ಇದೀಗ ಯಕ್ಷ ಪ್ರಶ್ನೆಯಾಗಿದೆ.

## ಏಪ್ರಿಲ್ 10 ರಂದು ಜನಸ್ಪಂದನಾ ಸಭೆ

• ಪ್ರಜೋದಯ ವರದಿ

**ಹಾಸನ:** ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಏ.10 ರಂದು ಬೆಳಿಗ್ಗೆ 10 ಗಂಟೆಗೆ ಬೇಲೂರು ತಾಲ್ಲೂಕು ಕಚೇರಿ ಆವರಣದಲ್ಲಿ ಜನಸ್ಪಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಸಾರ್ವಜನಿಕರು ಕುಂದು ಕೊರತೆ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿರ್ವಹಣಾ ತಂತ್ರಾಂಶ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಅದರಂತೆ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

# ಜಾತಿ ಜನಗಣತಿ: ಸಮಗ್ರ - ನಿಖರವಾಗಿರಲಿ

• ಪ್ರಜೋದಯ ವರದಿ



**ಸಕಲೇಶಪುರ:** ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜಾತಿ ಜನಗಣತಿಯನ್ನು ತಾಲೂಕಿನಲ್ಲಿ ಯಶಸ್ವಿಯಾಗಿ ನಡೆಸುವ ಉದ್ದೇಶ ದಿಂದ ಪಟ್ಟಣದ ಸಂತ ಜೋಸೆಫರ ಶಾಲೆಯಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ವಿಶೇಷ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರೇಡ್-2 ತಹಶೀಲ್ದಾರ್ ಜನಾರ್ಧನ್ ಅವರು, ಜಾತಿ ಜನಗಣತಿ ಪ್ರಕ್ರಿಯೆಯು ಸಮಗ್ರ ಮತ್ತು ನಿಖರವಾಗಿರಬೇಕು. ಪ್ರತಿಯೊಬ್ಬ ನಾಗರಿಕರ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ದಾಖಲಿಸುವುದು ಅತ್ಯಂತ ಪ್ರಮುಖವಾಗಿದ್ದು, ಯಾವುದೇ ತಪ್ಪುಗಳಿಗೆ ಅವಕಾಶ ನೀಡಬಾರದು ಎಂದು ಅವರು ಸೂಚಿಸಿದರು.

ಜನಗಣತಿಯ ಮಾಹಿತಿಗಳು ಸರ್ಕಾರದ ಭವಿಷ್ಯದ ಯೋಜನೆಗಳಿಗೆ ಮಾರ್ಗದರ್ಶಿಯಾಗುವುದರಿಂದ ಗಣತಿದಾರರು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಗಣತಿದಾರರಿಗೆ ಮನೆ ಮನೆಗೆ ಭೇಟಿ ನೀಡುವ ವಿಧಾನ, ಮಾಹಿತಿ ಸಂಗ್ರಹಿಸುವ ಕ್ರಮ, ಡಿಜಿಟಲ್ ಸಾಧನಗಳ ಬಳಕೆ ಮತ್ತು ಸಾರ್ವಜನಿಕರೊಂದಿಗೆ ನಡೆಸಬೇಕಾದ ಸಂವಹನದ ಕುರಿತು ವಿವರವಾಗಿ ತಿಳಿಸಲಾಯಿತು. ಜೊತೆಗೆ, ಜನಗಣತಿ ವೇಳೆ ಎದುರಾಗುವ ಸವಾಲುಗಳು ಹಾಗೂ ಅವುಗಳನ್ನು ಸಮರ್ಥವಾಗಿ ನಿಭಾಯಿಸುವ ಕುರಿತು ಮಾರ್ಗದರ್ಶನ ನೀಡಲಾಗಿದೆ ಎಂದರು.

ತಾಲ್ಲೂಕು ಮಟ್ಟದ ಅಧಿಕಾರಿಗಳು, ಶಾಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಗಣತಿದಾರರು ಹಾಜರಿದ್ದರು.

## ಅನಿಲ ಸಿಲಿಂಡರ್ ಅಗತ್ಯ ಪ್ರಮಾಣದಲ್ಲಿ ಲಭ್ಯ: ಸಾರ್ವಜನಿಕರಿಗೆ ಆತಂಕ ಬೇಡ

**ಹಾಸನ:** ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಲಭ್ಯವಿರುವುದರಿಂದ ಎಲ್.ಪಿ.ಜಿ. ಸಿಲಿಂಡರ್‌ಗಳ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಗ್ರಾಹಕರು ಆತಂಕದಲ್ಲಿ ಅನಗತ್ಯ ಬುಕಿಂಗ್ ಮಾಡದಿರಲು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳು ಹಾಗೂ ಕೆಲವು ಮಾಧ್ಯಮಗಳಲ್ಲಿ ಎಲ್.ಪಿ.ಜಿ ರಿಫಿಲ್ ಬುಕ್ಕಿಂಗ್ ನಿಯಮಗಳಲ್ಲಿ ಬದಲಾವಣೆಗಳಾಗಿವೆ ಎಂಬ ಸುದ್ದಿ ಹರಿದಾಡುತ್ತಿದೆ, ಈ ಮಾಹಿತಿಗಳು ತಪ್ಪು ಮತ್ತು ಅವಾಸ್ತವಿಕವಾಗಿವೆ ಎಂದು ತಿಳಿಸಲಾಗುತ್ತದೆ.

ನಗರ ಪ್ರದೇಶಗಳಲ್ಲಿ ಎರಡು ರಿಫಿಲ್ ಬುಕ್ಕಿಂಗ್ ಗಳ ನಡುವಿನ ಕನಿಷ್ಠ ಅವಧಿ 25 ದಿನಗಳು, ಗ್ರಾಮೀಣ ಪ್ರದೇಶಗಳಲ್ಲಿ ಎರಡು ರಿಫಿಲ್ ಬುಕ್ಕಿಂಗ್‌ಗಳ ನಡುವಿನ ಕನಿಷ್ಠ ಅವಧಿ 45 ದಿನಗಳಾಗಿವೆ.

ಯಾವುದಾದರೂ ಏಜೆನ್ಸಿಗಳು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಿರುವುದು ಕಂಡುಬಂದಲ್ಲಿ ಅಥವಾ ಗ್ರಾಹಕರಿಗೆ ಮನೆಗೆ ಅನಿಲ ಸಿಲಿಂಡರ್ ಗಳನ್ನು ಸರಬರಾಜು ಮಾಡದೆ ಇದ್ದಲ್ಲಿ ಕಂಪನಿಗಳು ನಿಗಧಿ ಪಡಿಸಿದ ಸಮಯದಲ್ಲಿ ಕಾರ್ಯ ನಿರ್ವಹಿಸದೆ ಇದ್ದಲ್ಲಿ ಸಾರ್ವಜನಿಕರು ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ ರವರ ಕಚೇರಿಯ ಆಹಾರ ಸಿಬ್ಬಂದಿಗಳಿಗೆ ಹಾಗೂ ಜಿಲ್ಲೆಯ ಜಂಟಿ ನಿರ್ದೇಶಕರ ಕಚೇರಿ ದೂ.ಸಂ. 9606025519 ಗೆ ದೂರು ಸಲ್ಲಿಸಲು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭೂಮಿ ಕ್ಷೇಮಾಭಿವೃದ್ಧಿ ಸಂಘಕ್ಕೆ ನಿವೇಶನದ ಭರವಸೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಭೂಮಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಶಾಸಕ ಸಿ. ಎನ್. ಬಾಲಕೃಷ್ಣ ಅವರ 57ನೇ ವರ್ಷದ ಹುಟ್ಟುಹಬ್ಬವನ್ನ ಅದ್ದೂರಿಯಾಗಿ ಆಚರಿಸಿದರು.

ಭೂಮಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಂಕರಲಿಂಗೇಗೌಡ ಮಾತನಾಡಿ, ಶಾಸಕ ಸಿ.ಎನ್.ಬಾಲಕೃಷ್ಣ ರವರ ಹುಟ್ಟುಹಬ್ಬವನ್ನ ಅರ್ಥಪೂರ್ಣವಾಗಿ ಆಚರಿಸುತ್ತಿದ್ದು ಅವರ ರಾಜಕೀಯ ಜೀವನ ಹೀಗೆ ಸುಗಮವಾಗಿ ನಡೆಯಲಿ ಹಾಗೂ ಬಡವರ ದೀನದಲಿತರ ನೋವು ನಲಿವಿಗೆ ಸ್ಪಂದಿಸುವಂತ ಶಾಸಕರಿಗೆ ಮನವಿ ಮಾಡುವುದೇನೆಂದರೆ, ಭೂಮಿ ಕ್ಷೇಮಾಭಿವೃದ್ಧಿ ಸಂಘವು ಹಲವು ವರ್ಷಗಳಿಂದ ಸಾಮಾಜಿಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದು ನೊಂದವರ ದುನಿಯಾಗಿ ಕೆಲಸ ನಿರ್ವಹಿಸುತ್ತಿದೆ. ಆದರೆ ನಮ್ಮ ಸಂಘಕ್ಕೆ ಸ್ವಂತ ನಿವೇಶನ ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಶಾಸಕರು ಸಂಘಕ್ಕೆ ಒಂದು ನಿವೇಶನವನ್ನು ಮಂಜೂರು ಮಾಡಿಸಿಕೊಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಶಾಸಕ ಸಿ.ಎನ್. ಬಾಲಕೃಷ್ಣ ಅವರು ಮುಂದಿನ ದಿನಗಳಲ್ಲಿ ಪಟ್ಟಣಕ್ಕೆ ಹೊಂದಿ ಕೊಂಡಂತೆ ಇರುವ ಜಾಗವನ್ನ ಹುಡುಕಿ ಭೂಮಿ ಕ್ಷೇಮಾಭಿವೃದ್ಧಿ ಸಂಘಕ್ಕೆ ಹಸ್ತಾಂತರಿಸಲಾಗುವುದು ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಮಂಜು ನಾಥ್ ಬ್ರಿಕ್ಸ್, ಖಜಾಂಚಿ ಶ್ರೀಧರ್ ಗನ್ನಿ, ಗೌರವಾಧ್ಯಕ್ಷ ಗೂರನಹಳ್ಳಿ ರಮೇಶ್ ಇನ್ನಿತರರಿದ್ದರು.

# 70 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ



• ಪ್ರಜೋದಯ ವರದಿ

**ಆಲೂರು:** ಪಟ್ಟಣ ಪಂಚಾಯಿತಿ ವ್ಯಾಪ್ತಿಗೊಳಪಡುವ ವಿವಿಧ ವಾರ್ಡುಗಳಲ್ಲಿ ಸುಮಾರು 70 ಲಕ್ಷ ರೂ. ವೆಚ್ಚದಲ್ಲಿ ರಸ್ತೆ, ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದ 4 ನೆ ವಾರ್ಡಿನಲ್ಲಿ ಚರಂಡಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿ, ಪುರಸಭಾ ಕಾರ್ಯಾಲಯದ ಪಕ್ಕದಿಂದ ದೊಡ್ಡಬೀದಿ ಮುಖಾಂತರ ಪ್ರಕೃತಿ ನಗರ ರಸ್ತೆ ಅಭಿವೃದ್ಧಿ, 4 ನೆ ವಾರ್ಡಿನ ಸುಣ್ಣದಬೀದಿ ರಸ್ತೆ, ವಾರ್ಡು 1 ಮತ್ತು 2 ರಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ, ವಾರ್ಡು ನಂ. 3 ರಲ್ಲಿ ಡಾಂಬರೀಕರಣ ರಸ್ತೆ ಅಭಿವೃದ್ಧಿ ಕಾಮಗಾರಿ, 11 ರಲ್ಲಿ ಸಿ. ಸಿ. ರಸ್ತೆ ಅಭಿವೃದ್ಧಿ ಕಾಮಗಾರಿ, 11 ರಲ್ಲಿ ಸಿ. ಸಿ. ರಸ್ತೆ ಅಭಿವೃದ್ಧಿ ಕಾಮಗಾರಿ, 9 ರಲ್ಲಿ ಹಳೆ ಸಂತೆ ಬೀದಿ ರಸ್ತೆ ಕಾಮಗಾರಿ, ಬಿ. ಎಂ. ರಸ್ತೆ ಸರ್ಕಾರಿ ಆಸ್ಪತ್ರೆ ಹತ್ತಿರ ಚರಂಡಿಗಳಿಗೆ ಕವರಿಂಗ್ ಸ್ಲ್ಯಾಬ್ ನಿರ್ಮಾಣ ಮತ್ತು ವಾರ್ಡು ನಂ. 10 ರಲ್ಲಿ ರಸ್ತೆಗೆ ಮರು ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಪಪಂ ಮುಖ್ಯಾಧಿಕಾರಿ ಮಂಜುನಾಥ್, ಸ್ಥಳೀಯ ಮುಖಂಡರು ಮತ್ತು ಅಧಿಕಾರಿಗಳು ಹಾಜರಿದ್ದರು.

## ರಾಜ್ಯದ 3,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಶಿಥಿಲಾವಸ್ಥೆಯಲ್ಲಿ: ಆರ್.ಅಶೋಕ್

# 'ಸಿಎಂಗೆ ದೋಸೆ ಮಜಾ, ಮಕ್ಕಳಿಗೆ ಜೀವ ಭಯ'

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದಲ್ಲಿ 3,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಸಂಪೂರ್ಣವಾಗಿ ಶಿಥಿಲಾವಸ್ಥೆ ತಲುಪಿದ್ದು, ಯಾವುದೇ ಕ್ಷಣದಲ್ಲೂ ಕುಸಿಯುವ ಭೀತಿಯಲ್ಲಿವೆ. ಈ ಗಂಭೀರ ವಿಚಾರದ ಬಗ್ಗೆ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಪ್ರತಿಪಕ್ಷ ನಾಯಕ ಆರ್. ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸರ್ಕಾರಿ ಶಾಲೆಗಳ ದುಸ್ಥಿತಿಯ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿರುವ ಅವರು, ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಕಟುವಾಗಿ ಟೀಕಿಸಿದ್ದು, ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಕಟ್ಟಡಗಳು ಕುಸಿಯುವ ಹಂತದಲ್ಲಿವೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತ್ರ ಮೈಸೂರಿನಲ್ಲಿ ಮೈಲಾರಿ ದೋಸೆ, ಬೆಣ್ಣೆ ದೋಸೆ ಸವಿಯುತ್ತಾ ಮಜಾ ಮಾಡುತ್ತಿದ್ದಾರೆ. ಸಿಎಂ ಅವರಿಗೆ ಬಡ ಮಕ್ಕಳ ಶಿಕ್ಷಣ ಹಾಗೂ ಭದ್ರತೆಗಿಂತ ದೋಸೆ ಸವಿಯುವುದೇ ಮುಖ್ಯವಾಯಿತೇ? ಎಂದು ಆರ್. ಅಶೋಕ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಮುಂದುವರಿದು ಮುಖ್ಯಮಂತ್ರಿಗಳನ್ನು ನೇರವಾಗಿ ಪ್ರಶ್ನಿಸಿರುವ ಅವರು, ಸಿಎಂ ಸಿದ್ದರಾಮಯ್ಯನವರೇ, ಮಕ್ಕಳು ಶಿಕ್ಷಣ ಕಲಿಯಲು ಶಾಲೆಗೆ ಬರಬೇಕೇ ಅಥವಾ ಕುಸಿಯುವ ಹಂತದಲ್ಲಿರುವ ಕಟ್ಟಡಗಳಿಗೆ ಬಲಿಯಾಗಲು ಶಾಲೆಗೆ ಬರಬೇಕೇ? ಒಂದು ವೇಳೆ ನಿಮ್ಮದೇ ಕುಟುಂಬದ ಮಕ್ಕಳು ಇಂತಹ ಅಪಾಯಕಾರಿ ಶಾಲೆಗಳಲ್ಲಿ ಓದುತ್ತಿದ್ದರೆ ನೀವು ಸುಮ್ಮನೆ ಇರುತ್ತಿದ್ದಿರಾ? ಸರ್ಕಾರಿ ಶಾಲೆಗಳ ಬಗ್ಗೆ, ಬಡವರ ಮಕ್ಕಳ ಭವಿಷ್ಯದ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯವೇಕೆ? ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅತ್ಯಂತ ಕಳಪೆಯಾಗಿದೆ. ಮಳೆಗಾಲದಲ್ಲಿ ಸೋರುವ ಛಾವಣಿಗಳು, ಬಿರುಕು ಬಿಟ್ಟ ಗೋಡೆಗಳು ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಆತಂಕ ಮೂಡಿಸಿವೆ. ಸಾವಿರಾರು ವಿದ್ಯಾರ್ಥಿಗಳು ಜೀವ ಕೈಯಲ್ಲಿಡಿದು ಪಾಠ ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಗುಣಮಟ್ಟದ ಶಿಕ್ಷಣ ನೀಡಬೇಕಾದ ಸರ್ಕಾರಿ ಶಾಲೆಗಳು ಇದೀಗ ಅಪಾಯದ ತಾಣಗಳಾಗಿ ಮಾರ್ಪಡುತ್ತಿರುವುದು ನಿಜಕ್ಕೂ ಆತಂಕಕಾರಿ ಸಂಗತಿಯಾಗಿದೆ.

ಈ ಬಗ್ಗೆ ಶಿಕ್ಷಣ ಇಲಾಖೆ ಹಾಗೂ ರಾಜ್ಯ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಳ್ಳಬೇಕಿದೆ. ಶಿಥಿಲಗೊಂಡಿರುವ ಕಟ್ಟಡಗಳನ್ನು ಗುರುತಿಸಿ, ಆದ್ಯತೆಯ ಮೇರೆಗೆ ದುರಸ್ತಿ ಕಾರ್ಯ ಅಥವಾ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಆಸರೆಯಾಗಿರುವ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಕೇವಲ ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ಸೀಮಿತವಾಗದೆ, ಮಕ್ಕಳ ಭವಿಷ್ಯ ಹಾಗೂ ಭದ್ರತೆಯ ಹಿತದೃಷ್ಟಿಯಿಂದ ಸರ್ಕಾರ ತ್ವರಿತವಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ ಎಂದು ತಿಳಿಸಿದ್ದಾರೆ.


## ಪ್ರಮಾಣ ಪತ್ರ

ಹಾಸನ ಜಿಲ್ಲೆ, ಹಾಸನ ಸಂಗಮೇಶ್ವರ ಬಡಾವಣೆ ಶಿವ ಪಾರ್ವತಿ ದೇವಸ್ಥಾನ ಹತ್ತಿರ ವಾಸವಾಗಿರುವ ರಾಘವೇಂದ್ರ ವಿ. ಬಿನ್ ವೆಂಕಟೇಶ್ ಅವರು ಸುಮಾರು 50 ವರ್ಷ ವಯಸ್ಸಿನ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಪಾಳ್ಯ ಹೋಬಳಿ ವಿರೂಪಾಪುರ ಗ್ರಾಮಕ್ಕೆ ಸೇರಿದ ಖುಷ್ಕಿ ಜಮೀನಿನ ಸರ್ವೆ ನಂ. 18/2 ರಲ್ಲಿ ಜಮೀನಿನ ವಿಸ್ತೀರ್ಣ ಒಂದು ಎಕರೆ ಎರಡೂವರೆ ಗುಂಟೆ (1-02 1/2 ಎಕರೆ/ಗುಂಟೆ) ಸದರಿ ಕ್ರಯಪತ್ರದ ಸಂಖ್ಯೆ ನಂಬರ್ ಎಎಲ್‌ಆರ್-1- 00283- 2013-14. ಸಿಡಿ ನಂ. ಎಎಲ್‌ಆರ್‌ಡಿ 27. 1ನೇ ಪುಸ್ತಕದ 283ನೇ ಸಂಪುಟದಲ್ಲಿ ದಿನಾಂಕ: 30-05-2013 ರಂದು ಆಲೂರು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಾಯಿಸಲಾಗಿದೆ. ಹಾಗೂ ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಪಾಳ್ಯ ಹೋಬಳಿ ವಿರೂಪಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 18/3, ವಿಸ್ತೀರ್ಣ (1-02 1/2 ಎಕರೆ/ಗುಂಟೆ) ಸದರಿ ಕ್ರಯಪತ್ರದ ಸಂಖ್ಯೆ ನಂಬರ್ ಎಎಲ್‌ಆರ್-1- 00284- 2013-14 ಆಗಿ. ಸಿಡಿ ನಂ. ಎಎಲ್‌ಆರ್‌ಡಿ 27ನೇ 284ನೇ ಸಂಪುಟದಲ್ಲಿ ದಿನಾಂಕ: 30-05-2013 ರಂದು ಆಲೂರು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಾಯಿಸಲಾಗಿದೆ.

ಈ ಮೂಲ (ಒರಿಜಿನಲ್ ಪತ್ರಗಳು) ಈ ಮೂಲ ಪತ್ರಗಳು ಮನೆಯನ್ನು ಸ್ವಚ್ಛಗೊಳಿಸಿ ಪೈಂಟ್ ಮಾಡುವ ಸಂದರ್ಭದಲ್ಲಿ ಕಳೆದು ಹೋಗಿರುವುದರಿಂದ ಆಲೂರು ಉಪ ನೊಂದಣಾಧಿಕಾರಿಗಳ ಕಚೇರಿಯಿಂದ ನಕಲು ಪ್ರತಿಯನ್ನು ತೆಗೆದುಕೊಂಡಿರುತ್ತೇನೆ. ಮೂಲ ಪ್ರತಿಯನ್ನು ಯಾವುದೇ ಬ್ಯಾಂಕಿನಲ್ಲಿಯಾಗಲೀ ಅಥವಾ ಖಾಸಗಿಯವರಲ್ಲಾಗಲೀ ಆಧಾರವಾಗಿ ಇಟ್ಟಿರುವುದಿಲ್ಲವೆಂದು ಈ ಮೂಲಕ ತಿಳಿಸಲು ಇಚ್ಛಿಸುತ್ತೇನೆ ಮತ್ತು ಯಾವುದೇ ಸಂದರ್ಭದಲ್ಲಿ ಯಾರಿಗೇ ಸಿಕ್ಕರೂ ದುರುಪಯೋಗಪಡಿಸಿಕೊಳ್ಳಬಾರದು ಎಂದು ಈ ಮೂಲಕ ತಿಳಿಸುತ್ತೇನೆ.

ಮೇಲೆ ತಿಳಿಸಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡುತ್ತೇನೆ.

ದಿನಾಂಕ : 02/04/2026 ಸಹಿ/
ಸ್ಥಳ : ಹಾಸನ ರಾಘವೇಂದ್ರ, ವಿ.

## ಬಂಗಾಳ ಮೇಲೆ ಕಣ್ಣು ನೆಟ್ಟರೆ ಪಾಕ್ ಮತ್ತೆಷ್ಟು ಹೋಳು

• ಪ್ರಜೋದಯ ವರದಿ



**ಕೋಲ್ಕತ್ತಾ:** ಕೋಲ್ಕತ್ತಾ ಮೇಲೆ ದಾಳಿ ನಡೆಸುವ ಕುರಿತ ಪಾಕಿಸ್ತಾನದ ಬೆದರಿಕೆಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ತಿರುಗೇಟು ನೀಡಿದ್ದಾರೆ.

55 ವರ್ಷಗಳ ಹಿಂದೆಯೇ ಪಾಕಿಸ್ತಾನ ಎರಡಾಗಿ ವಿಭಜನೆ ಗೊಂಡಾಗ ಅದರ ಪರಿಣಾಮಗಳನ್ನು ಎದುರಿಸಿತ್ತು. ಪಾಕಿಸ್ತಾನದ ರಕ್ಷಣಾ ಸಚಿವರು ಇಂತಹ ಪ್ರಚೋದನಕಾರಿ ಹೇಳಿಕೆಯನ್ನು ನೀಡಬಾರದು. ಮತ್ತೆ ಬಂಗಾಳದ ಮೇಲೆ ಕಣ್ಣು ನೆಟ್ಟರೆ ಪಾಕಿಸ್ತಾನ ಎಷ್ಟು ಭಾಗಗಳಾಗಿ ವಿಭಜನೆಯಾಗುತ್ತದೆಂಬುದನ್ನು ದೇವರೇ ಬಲ್ಲ ಎಂದು ಎಚ್ಚರಿಸಿದ್ದಾರೆ.

ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಕೋಲ್ಕತ್ತಾ ಮೇಲೆ ದಾಳಿ ನಡೆಸುವುದಾಗಿ ಹೇಳಿಕೆ ನೀಡಿದ್ದರು. ಪಾಕಿಸ್ತಾನದ ಬೆದರಿಕೆಗೆ ಪ್ರಧಾನಿ ನರೇಂದ್ರ ಮೋದಿ ಏಕೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದರು.

# ರಾಜ್ಯದ 8 ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಅಕ್ರಮ ಆಸ್ತಿ ಗಳಿಕೆ ಪ್ರಕರಣ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯಾದ್ಯಂತ ಎಂಟು ಅಧಿಕಾರಿಗಳ ಮನೆ ಹಾಗು ಕಚೇರಿ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಕೊಡಗು, ಬೀದರ್, ಬಳ್ಳಾರಿ, ಚಿತ್ರದುರ್ಗ ಮತ್ತು ಮೈಸೂರು ಸೇರಿ ವಿವಿಧ ಇಲಾಖೆ ಹಾಗು ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಂಟು ಅಧಿಕಾರಿಗಳ ಮನೆ ಮತ್ತು ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಕೊಡಗು ಜಿಲ್ಲೆಯ ಹಾರಂಗಿ ಅಣೆಕಟ್ಟು ಉಪ ವಿಭಾಗದಲ್ಲಿ ನಿಯೋಜಿಸಲಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ಎಇಇ) ಐ.ಕೆ.ಪುಟ್ಟಸ್ವಾಮಿ ಅವರ ನಿವಾಸ ಹಾಗು ಕಚೇರಿ ಮೇಲೆ ದಾಳಿ ನಡೆದಿದೆ.

ಚಿತ್ರದುರ್ಗ ನಿರ್ಮಿತಿ ಕೇಂದ್ರದ ಸಹಾಯಕ ಲೆಕ್ಕಾಧಿಕಾರಿ ಸುಶೀಲಮ್ಮ ಮನೆ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಮೆದೇಹಳ್ಳಿ ರಸ್ತೆ ನಿವಾಸ ಹಾಗು ಹಿರಿಯೂರಿನ ಯಾರದಕಟ್ಟೆ ತೋಟದ ಮನೆ ಮೇಲೆ ದಾಳಿ ನಡೆಸಲಾಗಿದೆ.



ಬಳ್ಳಾರಿಯಲ್ಲೂ ಬೆಳ್ಳಂ ಬೆಳಿಗ್ಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಶಿವಣ್ಣ ಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಲಾಗಿದೆ. ಬಳ್ಳಾರಿ ನಗರದ ಸಿದ್ಧಾರ್ಥ್ ನಗರದಲ್ಲಿರುವ ಮನೆ ಸೇರಿ ನಾಲ್ಕು ಕಡೆ ದಾಳಿ ನಡೆದಿದೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಬಗ್ಗೆ ಆರೋಪ ಕೇಳಿ ಬಂದಿದ್ದ ಹಿನ್ನಲೆಯಲ್ಲಿ ದಾಳಿ ಮಾಡಲಾಗಿದೆ. ಶಿವಮೊಗ್ಗಾದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶೋಭಾ ಅವರ ಕಚೇರಿ ಹಾಗು ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆದಿದೆ. ಶಿಕಾರಿಪುರ ಬಳಿ ತರಲಘಟ್ಟ ನಿವಾಸ, ಸಾಗರ ತಾಲ್ಲೂಕಿನ ಆನಂದಪುರ ಬಳಿ ಆಚಾಪುರ ಶಾಲೆ-ಕಚೇರಿ ಹಾಗು ಚಾಲುಕ್ಯ ನಗರದ ರಾಘವೇಂದ್ರ, ಅವರ ನಿವಾಸ ಸೇರಿ 3-4 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಬೆಳಗಾವಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಎಇಇ ಅಜಯ್ ಸಿಂಗ್ ರಜಪೂತ್ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಬೆಳಗಾವಿ ಆಂಜನೇಯ ನಗರ, ಅಥಣಿ ಹಾಗು ಹುಕ್ಕೇರಿ ಸೇರಿ ಮೂರು ಸ್ಥಳಗಳಲ್ಲಿಯೂ ಏಕಕಾಲದಲ್ಲಿ ದಾಳಿ ನಡೆದಿದೆ. ದಾಳಿ ವೇಳೆ ಒಂದು ಕೆಜಿ ಚಿನ್ನಾಭರಣ ಪತ್ತೆಯಾಗಿವೆ. ಬ್ಯಾಂಕ್‌ನಲ್ಲಿ 2 ಕೋಟಿ ರೂ. ಠೇವಣಿ ಪತ್ತೆಯಾಗಿದೆ. ಅಕ್ರಮ ಆಸ್ತಿ ಸಂಪಾದನೆ ಆರೋಪದ ಮೇಲೆ ಡಿವೈಎಸ್ಪಿ ಬಿ.ಎಸ್.ಪಾಟೀಲ್ ಮತ್ತು ಭರತ್ ರೆಡ್ಡಿ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಅಜಯ್ ಸಿಂಗ್ ನಗರದಲ್ಲೇ ಅಕ್ಕಪಕ್ಕದಲ್ಲಿ ಮೂರು ಮನೆಗಳನ್ನು ಹೊಂದಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ಲೋಕಾಯುಕ್ತ ಪೊಲೀಸರು ಮಂಡ್ಯ ಲೋಕೋಪಯೋಗಿ ಇಲಾಖೆಯ ಎಇಇ ರೇವಣ್ಣ ವಿರುದ್ಧ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಆರೋಪ ಕೇಳಿಬಂದ ಹಿನ್ನಲೆಯಲ್ಲಿ ದಾಳಿ ನಡೆಸಿ ದ್ದಾರೆ. ಮೈಸೂರಿನ ಕಚೇರಿ ಹಾಗು ಮಂಡ್ಯದ ಎರಡು ನಿವಾಸಗಳಲ್ಲಿ ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಶೈಲೇಂದ್ರ ಮತ್ತು ವೆಂಕಟೇಶ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ಶಶಿಕುಮಾರ್ ಸೇರಿ ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಿದೆ.

## ಹೊಗೆಸೊಪ್ಪು ಬೆಳೆಗಾರರ ಪ್ರತಿಭಟನೆ ವಾಪಾಸ್

• ಪ್ರಜೋದಯ ವರದಿ

**ಅರಕಲಗೂಡು:** ಹೊಗೆಸೊಪ್ಪು ಬೆಲೆ ಕುಸಿತ ಖಂಡಿಸಿ ಹಾಗು ಎಲ್ಲಾ ಗ್ರೇಡ್ ಬೇಲ್‌ಗಳನ್ನು ಅಧಿಕ ದರದೊಂದಿಗೆ ಖರೀದಿಸಬೇಕೆಂದು ಆಗ್ರಹಿಸಿ ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು ತಾಲ್ಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆ ಆವರಣದಲ್ಲಿ ಹಮ್ಮಿಕೊಂಡಿದ್ದ ಅಹೋರಾತ್ರಿ ಧರಣಿಯನ್ನು ವಾಪಾಸ್ ಪಡೆಯಲಾಗಿದೆ.

ಮಂಗಳವಾರ ಸಂಜೆ ತಹಶೀಲ್ದಾರ್ ಸೌಮ್ಯ ಮತ್ತು ಡಿವೈಎಸ್ಪಿ ನೇತೃತ್ವದಲ್ಲಿ ಪ್ರತಿಭಟನಾ ನಿರತರೊಂದಿಗೆ ಮಾತುಕತೆ ನಡೆಸಿ ಮನವೊಲಿಸಲಾಯಿತು.

ಬೆಲೆ ಸ್ಥಿರತೆ ಕುರಿತು ಜಿಲ್ಲಾಧಿಕಾರಿ, ಶಾಸಕರು ಹಾಗು ತಂಬಾಕು ಮಂಡಳಿ ಮತ್ತು ಖರೀದಿಸುವ ಕಂಪನಿ ಅಧಿಕಾರಿಗಳ ಸಭೆಯನ್ನು ಏ.15ರಂದು ಕರೆಯಲಾಗಿದ್ದು, ಅಂದಿನ ಸಭೆಯಲ್ಲಿ ತಂಬಾಕು ಬೆಲೆ ಸ್ಥಿರತೆ ಎಲ್ಲಾ ತರಹದ ಸೊಪ್ಪು ಖರೀದಿಯನ್ನು ಮಾಡುವ ಕುರಿತು ತೀರ್ಮಾನ ಕೈಗೊಳ್ಳುವ ಭರವಸೆ ಹಿನ್ನಲೆ ಧರಣಿಯನ್ನು ವಾಪಾಸ್ ಪಡೆದಿದ್ದಾರೆ.

ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಗೌರವಾಧ್ಯಕ್ಷ ಸೀಬಳ್ಳಿ ಯೋಗಣ್ಣ ಅವರು ಮಾತನಾಡಿ, ತಂಬಾಕಿಗೆ ವೈಜ್ಞಾನಿಕ ಬೆಲೆ ನೀಡಿ ದರ ಕಾಪಾಡಿಕೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ. ಆರಂಭದಲ್ಲಿ 320 ರೂ. ದರ



ನೀಡಿ ತದನಂತರ ಹರಾಜಿನಲ್ಲಿ ಬೇಕಾಬಿಟ್ಟೆ ಬೆಲೆ ನೀಡಿ ರೈತರಿಗೆ ಮೋಸ ಮಾಡಲಾಗುತ್ತಿದೆ. ಕೆಳ ದರ್ಜೆಯ ಬೇಲ್‌ಗಳನ್ನು ಖರೀದಿಸದೆ ರೈತರಿಗೆ ಕಿರುಕುಳ ನೀಡಲಾಗುತ್ತಿದೆ. ಒಮ್ಮೆ ಮಾರುಕಟ್ಟೆಗೆ ತಂದ ಬೇಲ್‌ಗಳನ್ನು ಬಿಡ್ ಮಾಡದೆ ತಿರಸ್ಕರಿಸಿ ವಾಪಾಸ್ ಕಳುಹಿಸಲಾಗುತ್ತಿದೆ ಎಂದು ಪ್ರತಿಭಟನಾನಿರತ ರೈತರ ಆರೋಪವಾಗಿದೆ.

ರೈತರು ಮತ್ತೆ ಬೇಲ್‌ಗಳನ್ನು ಮಾಡಿ ಮಾರುಕಟ್ಟೆಗೆ ತಂದು ಬೇಕಾ ಬಿಟ್ಟಿ ಮಾಡುವಷ್ಟರಲ್ಲಿ ಹೈರಾಣಾಗುತ್ತಿದ್ದು, ಬೆಲೆಗೆ ಮಾರಾಟ ಬೆಳೆಗಾರರು ಮಾರುಕಟ್ಟೆಯಲ್ಲಿ ಅನುಭವಿಸುತ್ತಿರುವ ಕಷ್ಟ ಕೇಳುವವರೇ ಇಲ್ಲವಾಗಿದ್ದಾರೆ. ಬೆಳೆಗಾರರ ಹಿತ ಕಾಯಬೇಕಿದ್ದ ಮಂಡಳಿ ನಿಷ್ಕ್ರಿಯ ವಾಗಿದ್ದು, ಶ್ರೀಮಂತ ಕಂಪನಿಗಳ ವರ್ತಕರ ಕೈಗೊಂಬೆಯಾಗಿ ವರ್ತಿಸಿ ಅನ್ನದಾತರನ್ನು ಶೋಷಣೆ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕಿಸಾನ್ ಸಂಘದ ಅಧ್ಯಕ್ಷ ರವಿ, ಉಪಾಧ್ಯಕ್ಷ ಮಂಜು, ಮಂಜೇಗೌಡ, ತಮ್ಮೇಗೌಡ, ಸಂಜು, ದಿನೇಶ್, ಹೇಮಾಲತಾ, ಸೌಭಾಗ್ಯ, ಕಮಲಮ್ಮ ಇತರರಿದ್ದರು.

## ಸರ್ವೆ ನೌಕರರ ಪ್ರತಿಭಟನೆಯಿಂದ ರೈತರಿಗೆ ತೊಂದರೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸರ್ವೆ ಇಲಾಖೆ ನೌಕರರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದರಿಂದ ರೈತರ ಜಮೀನಿನ ಅಳತೆಯ ಕೆಲಸ ಆಗುತ್ತಿಲ್ಲ. ಕೂಡಲೇ ಸರ್ಕಾರ ಅದನ್ನು ಬಗೆಹರಿಸಬೇಕೆಂದು ರೈತ ಸಂಘದ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಕಳೆದ ಆರು ತಿಂಗಳಿನಿಂದಲೂ ಸರ್ವೆ ಕೆಲಸ ನೆನೆಗುದಿಗೆ ಬಿದ್ದಿದೆ. ರೈತರಿಂದ ಹಣ ಕೂಡ ಕಟ್ಟಿಸಿಕೊಂಡಿದ್ದು ಮೂರು ತಿಂಗಳ ಒಳಗೆ ಅಳತೆ ಮಾಡದಿದ್ದಲ್ಲಿ ಆ ಹಣ ವ್ಯರ್ಥವಾಗುತ್ತದೆ. ರೈತರ ಕಷ್ಟವನ್ನು ಕೇಳುವವರಿಲ್ಲದಂತೆ ಆಗಿದೆ. ಅಧಿಕಾರಿಗಳು ಮಾಡುವ ತಪ್ಪಿನಿಂದ ಪಹಣಿ ತಿದ್ದುಪಡಿ ಮಾಡಲು ಹೋಗಿ ಸರಿಪಡಿಸುವ ಬದಲು ತಪ್ಪು ಮಾಡುತ್ತಿದ್ದಾರೆ. ಮೂರು ಮತ್ತು ಒಂಬತ್ತು ಕಾಲಂ ಪಹಣಿಯಲ್ಲಿ ತಾಳೆ ಮಾಡು ವಾಗ ತಪ್ಪು ಎಸಗುತ್ತಿದ್ದಾರೆ. ತಾಲ್ಲೂಕಿನ 15ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕಂದಾಯ ಇಲಾಖೆಯ ಜಿಪಿಎಸ್ ಮ್ಯಾಪ್ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅದರಿಂದ ರೈತರು ಬೆಳೆ ಪರಿಹಾರ, ನೆಫೆಡ್ ಮೂಲಕ ಖರೀದಿಸುವ ಬೆಂಬಲ ಬೆಲೆಯನ್ನು ಪಡೆಯಲಾಗುತ್ತಿಲ್ಲ. ಸರ್ಕಾರ ಕೂಡಲೇ ಅದನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜೋಗಿಪುರ ಪ್ರಕಾಶ್, ಗಿರೀಶ್, ಪ್ರೇಮ್ ಕುಮಾರಿ, ರೇವಣ್ಣ, ಹರೀಶ್ ಇತರರು ಉಪಸ್ಥಿತರಿದ್ದರು.

## ಸಮೀವುಲ್ಲಾ ಆಡಳಿತಾವಧಿಯಲ್ಲಿ ಅಭಿವೃದ್ಧಿ ಶೂನ್ಯ

• ಪ್ರಜೋದಯ ವರದಿ



**ಅರಸೀಕೆರೆ:** ನಗರ ಅಭಿವೃದ್ಧಿಯಾಗಿದೆ ಎನ್ನುವ ನಗರಸಭೆ ಮಾಜಿ ಅಧ್ಯಕ್ಷ ಕೆ.ಎಂ.ಸಮೀವುಲ್ಲಾ ಕಮೀಷನ್ ಆಸೆಗಾಗಿ ಹಾಳು ಮಾಡಿದ್ದೇ ಹೆಚ್ಚು. ಅವರ ಕಾಲದಲ್ಲಿ ಅಭಿವೃದ್ಧಿ ಶೂನ್ಯವೆಂದು ಬಿಜೆಪಿ ಮುಖಂಡ ಕೆಂಪುಸಾಗರ ಶಿವರಾಜ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಸಮೀವುಲ್ಲಾ ಅವರು ಏನಾದರೂ ಒಳ್ಳೆಯ ಕೆಲಸ ಮಾಡಿದ್ದರೆ ದಾಖಲೆ ಸಮೇತ ಬಹಿರಂಗಪಡಿಸಬೇಕು. 2018ರಲ್ಲಿ ನಗರಸಭೆಗೆ ಖರೀದಿಸಲಾದ ಕಾಂಪ್ಯಾಕ್ಟರ್ ವಾಹನದ ವಿಚಾರದಲ್ಲಿ ನಡೆದ ಕಮೀಷನ್ ರಾಜಕಾರಣದಿಂದ ನಗರಸಭೆಗೆ 33.95 ಲಕ್ಷ ರೂ. ನಷ್ಟವಾಗಿದೆ ಎಂದರು.

ಅಂದಿನ ನಗರಸಭೆ ಅಧ್ಯಕ್ಷರು, ಆಯುಕ್ತರು ಹಾಗು ಅಧಿಕಾರಿಗಳ ವೈಫಲ್ಯದಿಂದ ಈ ಅವ್ಯವಸ್ಥೆ ಉಂಟಾಗಿ 8 ಅಧಿಕಾರಿಗಳಿಗೆ ಅಮಾನತು ಭೀತಿ ಎದುರಾಗಿತ್ತು. ಈ ಹಗರಣ ಬಹಿರಂಗಪಡಿಸಲು ಬಿಜೆಪಿ ನಗರ ಘಟಕ ನಿರಂತರ ಹೋರಾಟ ನಡೆಸಿತು. ನಗರಸಭೆ ಅಧಿಕಾರಿಗಳು ಹಾಗು ಸಾರಿಗೆ ಇಲಾಖೆ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಸಾಧಿಸಿದ ಪ್ರಯತ್ನದ ಫಲವಾಗಿ ಕಳೆದ ಮಾ.11 ರಂದು ಕಾಂಪ್ಯಾಕ್ಟರ್ ವಾಹನಕ್ಕೆ ನೋಂದಣಿ ಮಾಡಿಸಲು ಸಾಧ್ಯವಾಯಿತು. ಅದರಿಂದ ಅಧಿಕಾರಿಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆಂದರು.

2018ರಲ್ಲಿ ಕಾಂಪ್ಯಾಕ್ಟರ್ ವಾಹನ ಖರೀದಿಯಾದಾಗ ನಗರಸಭೆ ಅಧ್ಯಕ್ಷರಾಗಿದ್ದವರು ಕೆ.ಎಂ.ಸಮೀವುಲ್ಲಾ. ವಾಹನ ಖರೀದಿಸಿದ ಬಳಿಕವೂ ಅದು ವರ್ಷಗಳ ಕಾಲ ಸಾರ್ವಜನಿಕರ ಸೇವೆಗೆ ಲಭ್ಯವಾಗದಿರುವುದು ಆಡಳಿತ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆ. ಸಾರ್ವಜನಿಕರ ತೆರಿಗೆ ಹಣದಿಂದ ಖರೀದಿಸಿದ ವಾಹನವನ್ನು ವರ್ಷಗಟ್ಟಲೆ ಬಳಸದೆ ಮೂಲೆಯಲ್ಲಿ ನಿಲ್ಲಿಸಿದ್ದು ಅಭಿವೃದ್ಧಿಯೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಪುರುಷೋತ್ತಮ್, ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಚಂದ್ರಶೇಖರ್, ತಾಲ್ಲೂಕು ರೈತ ಮೋರ್ಚಾ ಅಧ್ಯಕ್ಷ ಅಶೋಕ್ ಇದ್ದರು.

## ಪರಿಷತ್ ನಡೆಯ ವಿರುದ್ಧ ಸಾಹಿತಿಗಳ ಅಸಹನೆ

» ಮೊದಲನೇ ಪುಟದಿಂದ

ಕಿರಣ ಶಾಂತರಸರ 101ನೇ ಜನ್ಮ ದಿನೋತ್ಸವದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಇತ್ತೀಚಿನ ನಿಲುವುಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಕಸಾಪ ಕೇವಲ ಆಚರಣೆಗಳಿಗೆ ಸೀಮಿತವಾಗುತ್ತಿದ್ದು, ಕನ್ನಡದ ಅಸ್ಮಿತೆ ಮತ್ತು ಹಿತಾಸಕ್ತಿ ಸಂಬಂಧಿತ ಪ್ರಮುಖ ವಿಷಯಗಳಲ್ಲಿ ಮೌನವಹಿಸುತ್ತಿರುವುದನ್ನು ಖಂಡಿಸಿದರು. ಶಾಂತರಸರಂತಹ ಹೋರಾಟಗಾರರು 1992ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ತಿರಸ್ಕರಿಸುವ ಮೂಲಕ ತತ್ವನಿಷ್ಠತೆಯನ್ನು ಪ್ರದರ್ಶಿಸಿದ್ದನ್ನು ಸ್ಮರಿಸಿದ ಅವರು, ಇಂದಿನ ಸಾಹಿತ್ಯಿಕ ಸಂಘಟನೆಗಳು ಆ ಬದ್ಧತೆಯನ್ನು ಕಳೆದುಕೊಂಡಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಕಸಾಪ ಮಾಜಿ ಅಧ್ಯಕ್ಷ ಬಿ.ಎನ್.ರಾಮಸ್ವಾಮಿ ಮಾತನಾಡಿ, ಸಾಹಿತ್ಯ ಮತ್ತು ಸಂಘಟನೆ ಒಂದು ನಾಣ್ಯದ ಎರಡು ಮುಖಗಳು. ಸಾಹಿತ್ಯದ ತೇರನ್ನು ಎಳೆಯಲು ಅಧಿಕಾರಕ್ಕಿಂತ ಕನ್ನಡದ ಬಗ್ಗೆ ಇರುವ ನಿಷ್ಠೆ ಮುಖ್ಯ ಎಂದರು.

ಇದೇ ವೇಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪತ್ರಕರ್ತ ರವಿ ನಾಕಲಗೂಡು ಅವರು ಮಾತನಾಡಿ, ಮಹನೀಯರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ನಿರಂತರವಾಗಬೇಕು. ಇಂತಹ ಕಾರ್ಯಕ್ರಮಗಳು ಸಂಸ್ಥೆಗಳ ಗೌರವವನ್ನು ಹೆಚ್ಚಿಸುತ್ತವೆ. ಶೀಘ್ರದಲ್ಲೇ ಹಾಸನದ ಹಿರಿಯ ಸಾಹಿತಿಗಳು ಹಾಗೂ ಸಂಘಟಕರನ್ನು ಒಂದೇ ವೇದಿಕೆಗೆ ತರಲು ಪ್ರಯತ್ನಿಸಲಾಗುವುದೆಂದು ತಿಳಿಸಿದರು.

ಶಿಕ್ಷಕರಾದ ಚೆನ್ನೇನಹಳ್ಳಿ ಸ್ವಾಮಿ ಹಾಗೂ ಕೊಟ್ರೇಶ್ ಉಪ್ಪಾರ್ ಮಾತನಾಡಿ, ಶಾಂತರಸರು ಕಲ್ಯಾಣ ಕರ್ನಾಟಕದಲ್ಲಿ ಕುವೆಂಪು ಅವರಂತೆ ಸಾಹಿತ್ಯಿಕ ಚಳುವಳಿ ರೂಪಿಸಿದವರು. ಕನ್ನಡ ಗಜಲ್ ಸಾಹಿತ್ಯಕ್ಕೆ ಅವರು ಹಾಕಿದ ಅಡಿಪಾಯ ಮತ್ತು ಸಾಮಾಜಿಕ ಚಿಂತನೆಗಳು ಇಂದಿನ ಪೀಳಿಗೆಗೆ ಮಾದರಿಯಾಗಬೇಕೆಂದರು.

ಸುರೇಶ್ ಗುರೂಜಿ, ನಗರಸಭೆ ಮಾಜಿ ಸದಸ್ಯ ವಾಸು, ಗೊರೂರು ಅನಂತ ರಾಜು, ದೇಸಾಯಿ, ಯಲಗುಂದ ಶಾಂತ ಕುಮಾರ್, ಹರೀಶ್ ಮಳಲಿ, ಬಾನಮ ಲೋಕೇಶ್, ನಿವೃತ್ತ ಪ್ರಾಧ್ಯಾಪಕ ಪ್ರಕಾಶ್, ನಿವೃತ್ತ ಬ್ಯಾಂಕ್ ಉದ್ಯೋಗಿ ಪರಮ ಶಿವಯ್ಯ, ಮಹಾಂತೇಶ್, ವಿಜಯಕುಮಾರ್, ಬಸವರಾಜ್, ಶಿಕ್ಷಕ ಸೋಮಶೇಖರ್, ಕೆ.ಟಿ.ಜಯಶ್ರೀ, ಶಿಕ್ಷಕಿ ಗಿರಿಜಾ ನಿರ್ವಾಣಿ, ಪತ್ರಕರ್ತರಾದ ರಘುನಂದನ್, ಉದಯರವಿ, ಬೂವನಹಳ್ಳಿ ಬಾಲು ಹಾಗೂ ದಿಟ್ಟ ಧ್ವನಿ ದೇವರಾಜೇಗೌಡ ಸೇರಿ ಅನೇಕರು ಶಾಂತರಸರಿಗೆ ನಮನ ಸಲ್ಲಿಸಿದರು.

## ಹೆತ್ತವರು ಕಣ್ಣೀರು ಸುರಿಸುವ ಕೆಲಸ ಮಾಡಬೇಡಿ: ಜಿಲ್ಲಾಧಿಕಾರಿ

» ಮೊದಲನೇ ಪುಟದಿಂದ

ಮೂಲಕ ಒಳ್ಳೆಯ ಬದುಕು ಕಟ್ಟಿಕೊಳ್ಳಬೇಕು. ಆ ಕ್ಷಣದ ಕೋಪ, ಅಜ್ಞಾನ ಮನುಷ್ಯನನ್ನು ಅಪರಾಧಿ ಯಾಗಿಸುತ್ತದೆ. ಚಿಕ್ಕ ವಯಸ್ಸಿಗೆ ಜೈಲಿನಲ್ಲಿರುವುದು ದೊಡ್ಡ ದುರಂತ. ತಪ್ಪು ಮಾಡಿದ ವ್ಯಕ್ತಿಗೆ ತಿದ್ದಿಕೊಳ್ಳಲು ಅವಕಾಶ ಸಿಗುತ್ತದೆಂದರು.

ಜೈಲಿನಿಂದ ಬಿಡುಗಡೆಯಾದ ಬಳಿಕ ಹೊಸ ಬದುಕು ಕಟ್ಟಿಕೊಳ್ಳಲು ಅವಕಾಶಗಳಿವೆ. ಖೈದಿಗಳಿಗೆ ವೃತ್ತಿ ಕೌಶಲ್ಯ ತರಬೇತಿ ನೀಡುವಂತೆ ಈಗಾಗಲೇ ಅಧಿಕಾರಿಗಳಿಗೆ ಹೇಳಲಾಗಿದೆ. ಆಕಾಶವಾಣಿ ಪ್ರಸಾರಕ್ಕೆ ಈ ಹಿಂದೆಯೇ ಸೂಚಿಸಿದ್ದೆ. ಜೊತೆಗೆ ಹಸಿರು ಹಾಸನ ಪರಿಕಲ್ಪನೆಯಡಿ ಸಸಿಗಳ ಬೆಳೆಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಕಳ್ಳತನ, ಹೊಡೆದಾಟ, ಕ್ಷುಲ್ಲಕ ಕಾರಣಗಳಿಗಾಗಿ 25 ರಿಂದ 30 ವರ್ಷದವರು ಜೈಲಿನಲ್ಲಿದ್ದೀರಿ. ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡಲು ಇದೊಂದು ಸಣ್ಣ ಶಿಕ್ಷೆ ಎಂದು ಭಾವಿಸಬೇಕು. ಯಾರೂ ಕೂಡ ಮಾನಸಿಕವಾಗಿ ಕುಗ್ಗದೆ ಆತ್ಮಸ್ಥೈರ್ಯದಿಂದ ಇರಬೇಕೆಂದರು.

**ವ್ಯವಸ್ಥೆ ಪರಿಶೀಲಿಸಿದ ಜಿಲ್ಲಾಧಿಕಾರಿ**

ಜೈಲು ಅಧೀಕ್ಷಕರೊಂದಿಗೆ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಖೈದಿಗಳೊಂದಿಗೆ ಸಮಾಲೋಚನೆ ನಡೆಸಿ ದರು. ಅಡುಗೆ ಕೋಣೆಗೆ ತೆರಳಿ ಊಟದ ಮೆನು ಪರಿ ಶೀಲಿಸಿದರು. ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ನೋಡಿ ಖೈದಿಗಳು ಓದುವ ಹವ್ಯಾಸ ಬೆಳೆಸಿಕೊಳ್ಳ ಬೇಕೆಂದ ಅವರು, ಜೈಲು ವಾಸಿಗಳ ಕಷ್ಟ ಸುಖ ಅರಿತರು. ಕಾರಾಗೃಹ ಅಧೀಕ್ಷಕ ಪ್ರಸನ್ನ, ಆಕಾಶವಾಣಿಯ ಮಧುಸೂದನ್, ರೋಟರಿ ಕ್ಲಬ್ ಆಫ್ ಹಾಸನ ಸನ್‌ರೈಸರ್ಸ್ ಅಧ್ಯಕ್ಷ ಮಂಜುನಾಥ್, ಪತ್ರಕರ್ತ ಬಿ.ಆರ್.ಉದಯಕುಮಾರ್ ಇತರರಿದ್ದರು.

## ವ್ಯಕ್ತಿಯ ಆರೋಗ್ಯ ಸಮತೋಲಿತ ಆಹಾರದಲ್ಲಿ ಅಡಗಿದೆ

• ಪ್ರಜೋದಯ ವರದಿ

**ಆಲೂರು:** ವ್ಯಕ್ತಿಯ ಆರೋಗ್ಯ ಸಮತೋಲಿತ ಆಹಾರ ಮತ್ತು ಉತ್ತಮ ಆಲೋಚನೆಯಲ್ಲಿ ಅಡಗಿರುತ್ತದೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ನಿಸಾರ್‌ಫಾತಿಮ ಅವರು ತಿಳಿಸಿದರು.




ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕ, ರೆಡ್‌ರಿಬ್ಬನ್ ಕ್ಲಬ್ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ವತಿಯಿಂದ ಏರ್ಪಡಿಸಲಾಗಿದ್ದ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ, ಆರೋಗ್ಯಕರ ಜೀವನಶೈಲಿ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಆರೋಗ್ಯವೆಂಬುದು ಪ್ರಪಂಚದಲ್ಲೇ ಅತ್ಯಂತ ಸುಂದರವಾದ ವಸ್ತು. ಅದಕ್ಕಿಂತ ಹೆಚ್ಚು ಯಾವುದೂ ಇಲ್ಲ. ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ಕುಟುಂಬದಿಂದ ದೊರಕುವ ಪ್ರೀತಿ, ಸಮಾಜದಿಂದ ಗೌರವ ಪಡೆಯಲು ಸದಾ ಯತ್ನಿಸುತ್ತಿರಬೇಕು. ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಸಮಾನ ಹಕ್ಕುಗಳಿವೆ. ಹೆಣ್ಣು ಮಕ್ಕಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಸ್.ಸತೀಶ್ ಅವರು ಮಾತನಾಡಿ, ಇಂದು ಜೀವನಶೈಲಿ ಬದಲಾಗುತ್ತಿದೆ. ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಸ್ವಚ್ಚವಾದ ನೀರು ಕುಡಿಯುವುದು, ಸ್ವಚ್ಚ ಪರಿಸರ, ವೈಯಕ್ತಿಕ ಸ್ವಚ್ಚತೆ, ಸಾಕಷ್ಟು ನಿದ್ರೆ, ಒತ್ತಡ ನಿರ್ವಹಣೆ ಮೊದಲಾದವುಗಳ ಮೂಲಕ ಆರೋಗ್ಯಕರ ಜೀವನ ಶೈಲಿಯನ್ನು ಬಲಪಡಿಸಬಹುದು. ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ. ಬೇಕರಿ, ಜಂಕ್ ಮತ್ತು ಫಾಸ್ಟ್ ಫುಡ್‌ಗಳಿಂದ ದೂರಿವಿರಿ, ಮಾಂಸ ಹಾರವನ್ನು ಹಿತ ಮಿತವಾಗಿ ಸೇವಿಸಿ. ಉನ್ಮಾದ ತರುವ ಮಾದಕ ವಸ್ತುಗಳಿಗೆ ಹೆಚ್ಚಾಗಿ ಹದಿ ಹರೆಯದ ಮಕ್ಕಳು ಬಲಿಯಾಗುತ್ತಿರುವುದು ದುರದೃಷ್ಟಕರ. ಅವುಗಳ ಸೇವನೆಯಿಂದ ದೂರವಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಟಿ.ಪಿ.ಪುಟ್ಟರಾಜು ಅವರು ಮಾತನಾಡಿ, ಆರೋಗ್ಯಕ್ಕಾಗಿ ಒಟ್ಟಾಗಿ, ವಿಜ್ಞಾನದ ಜೊತೆ ನಿಲ್ಲಿ ಎಂಬುದು ಈ ವರ್ಷದ ವಿಶ್ವ ಆರೋಗ್ಯ ದಿನಾಚರಣೆ ಧ್ಯೇಯ ವಾಕ್ಯವಾಗಿದ್ದು, ಎಲ್ಲರೂ ಸಾಕಾರಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಮೋಹನ್, ಮಂಜುನಾಥ ಸ್ವಾಮಿ, ಸಹ ಪ್ರಾಧ್ಯಾಪಕ ಕೆ.ಎನ್.ರಮೇಶ್, ಡಾ.ಪಿ.ಕೆ.ರಾಘವೇಂದ್ರ, ಜೆ.ಜಿ.ನಟರಾಜ್, ಟಿ.ಕೆ.ಸರಿತಾ, ಸೌಮ್ಯ ಇತರರು ಉಪಸ್ಥಿತರಿದ್ದರು.

## ಏ.10 ರಿಂದ 14ರ ವರೆಗೆ ಸೀರೆ ಮೇಳ

• ಪ್ರಜೋದಯ ವರದಿ

**ಹಾಸನ:** ನಗರದ ಎಂ.ಜಿ.ರಸ್ತೆಯ ರವೀಂದ್ರ ನಗರದ ರಾಘವೇಂದ್ರ ಮಠದ ಆವರಣದಲ್ಲಿ ಏ.10 ರಿಂದ 14ರ ವರೆಗೆ ಕಂಚಿ ಕಾಮಾಕ್ಷಿ ಸಿಲ್ಕ್ಸ್ ಸೀರೆ ಮೇಳ ಏರ್ಪಡಿಸಲಾಗಿದೆ ಎಂದು ಮೇಳ ಆಯೋಜಕ ಪ್ರದೀಪ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಹಾಸನ, ಅರಸೀಕೆರೆ, ಚನ್ನರಾಯ ಪಟ್ಟಣ, ಶಿವಮೊಗ್ಗಾ ಸೇರಿ ಅನೇಕ ಕಡೆ ಮೇಳ ಆಯೋಜಿಸಿದ್ದು ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರು ಸಿಲ್ಕ್, ಸಿಮಿ ಕ್ರೇಪ್ ಮೈಸೂರು ಸಿಲ್ಕ್, ಬೆಂಗಳೂರು ಸಿಲ್ಕ್, ಕಾಂಚೀ ಪುರಂ ಸಿಲ್ಕ್, ಬನಾರಸ್ ಸಿಲ್ಕ್ ಮೊದಲಾದ ಫ್ಯಾನ್ಸಿ ಸೀರೆಗಳು ಒಂದೇ ಕಡೆ ದೊರೆ ಯಲಿವೆ ಎಂದರು.

ವಿಶೇಷ ಎಂದರೆ 600 ರೂ. ನಿಂದ 25 ಸಾವಿರ ರೂ. ವರೆಗಿನ ಸೀರೆಗಳ ಪೈಕಿ ಒಂದು ತೆಗೆದುಕೊಂಡರೆ ಮತ್ತೊಂದು ಉಚಿತವಾಗಿ ಸಿಗಲಿದೆ. ಗರಿಷ್ಟ 35 ಸಾವಿರ ರೂ. ವರೆಗೆ ಉತ್ಕೃಷ್ಟ ಸೀರೆಗಳು ದೊರೆಯಲಿದ್ದು, ಬೇರೆ ಕಡೆಗಳಿಗಿಂತ ಶೇ.30 ರಿಂದ 40ರಷ್ಟು ಕಡಿಮೆ ದರದಲ್ಲಿ ಸಿಗಲಿವೆ. ಪುರುಷರ ರೇಷ್ಮೆ ಟಿ ಶರ್ಟ್‌ಗಳನ್ನು ಸಹ ಮಾರಾಟ ಮಾಡಲಾಗುತ್ತಿದೆಂದು ತಿಳಿಸಿದರು.

## ಗಣಿಗಾರಿಕೆಗೆ ಅನುಮತಿ ನೀಡಲು ಪ್ರತಿಭಟನೆ: ಸ್ವಾಮೀಜಿ ಭಾಗಿ

• ಪ್ರಜೋದಯ ವರದಿ

**ಹಾಸನ:** ಭೋವಿ ಜನಾಂಗದ ಕುಲಕಸುಬಿಗೆ ಅಡ್ಡಿಪಡಿಸಿರುವುದು ಖಂಡನೀಯ ಎಂದು ಬಾಗಲಕೋಟೆ-ಚಿತ್ರದುಗ ಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದರು.

ಆಲೂರು ತಾಲ್ಲೂಕಿನ ಜಯಂತಿ ನಗರ, ಕಾರಗೋಡು, ವೈ.ಎನ್.ಪುರ ಬಳಿ ಕಲ್ಲು ಗಣಿಗಾರಿಕೆ ನಿಷೇಧಿಸಿ ಜಿಲ್ಲಾಡಳಿತ ಆದೇಶಿಸಿರುವುದನ್ನು ವಿರೋಧಿಸಿ ಸಮಾಜದವರು ನಡೆಸುತ್ತಿರುವ 8ನೇ ದಿನ ಅನಿರ್ದಿಷ್ಟಾವಧಿ ಧರಣಿಯಲ್ಲಿ ಮಂಗಳವಾರ ಭಾಗಿಯಾಗಿ ಮಾತನಾಡಿದ ಅವರು, ಸೈಜುಗಲ್ಲು ಒಡೆದು ಬದುಕು ಕಟ್ಟಿಕೊಂಡಿರುವವರ ವಿರುದ್ಧ ದ್ವೇಷ ಸಾಧಿಸುವುದು ಸರಿಯಲ್ಲ. ಪೂರ್ವಿಕರ ಕಾಲದಿಂದಲೂ ಈ ವೃತ್ತಿಯನ್ನೇ ಸಮಾಜದವರು ನಂಬಿದ್ದಾರೆ. ಯಾರದೋ ಮಾತು ಕೇಳಿ ಜಿಲ್ಲಾಡಳಿತ ಗಣಿಗಾರಿಕೆ ಸ್ಥಗಿತಗೊಳಿಸಿರುವುದು ಖಂಡನೀಯ ಎಂದರು.

ಸುಮಾರು 250 ರಿಂದ 300 ಮಂದಿ ಮಗ್ಗೆ ಗ್ರಾಮದ ಸರ್ವೆ ನಂ.151ರ ಸರ್ಕಾರಿ ಗೋಮಾಳದ 3 ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತ್ತಿದ್ದರು. ಇದು ಅವರ ಪಾರಂಪರಿಕ ಕುಲಕಸುಬಾಗಿದೆ. ಮಕ್ಕಳ ಶಿಕ್ಷಣ, ಆರೋಗ್ಯ ಸೇರಿ ದಿನನಿತ್ಯದ ಬದುಕು ಇದೇ ಉದ್ಯೋಗದ



ಮೇಲೆ ಅವಲಂಬಿತವಾಗಿದೆ. ಅವರಲ್ಲಿ ಬಹುತೇಕರಿಗೆ ಸ್ವಂತ ಕೃಷಿ ಭೂಮಿಯಿಲ್ಲದೆ ಸಂಪೂರ್ಣವಾಗಿ ಈ ಕೆಲಸದ ಮೇಲೆಯೇ ಅವಲಂಬಿತರಾಗಿದ್ದಾರೆಂದು ಹೇಳಿದರು.

ಸುಳ್ಳು ಆರೋಪ ಮೂಲಕ ಗಣಿಗಾರಿಕೆಗೆ ಅಡ್ಡಿಪಡಿಸುತ್ತಿರುವುದು ತಿಳಿದು ಬಂದಿದೆ. ತಾತ್ಕಾಲಿಕ ನಿಷೇಧ ಹೇರಿರುವುದು ಕಾರ್ಮಿಕರಲ್ಲಿ ಆತಂಕ ಮೂಡಿಸಿದೆ. ಈಗಾಗಲೇ ತನಿಖೆ ನಡೆಸಿ ಯಾವುದೇ ತಪ್ಪಿಲ್ಲವೆಂದು ದೃಢಪಟ್ಟಿರುವ ಕಾರಣ ಮತ್ತೆ ವರದಿ ಕೇಳದೆ ಗಣಿಗಾರಿಕೆ ಮತ್ತೆ ಆರಂಭಿಸಬೇಕೆಂದು ಒತ್ತಾಯಿಸಿದರು.

ಭೋವಿ ಸಂಘದ ರಾಜ್ಯಾಧ್ಯಕ್ಷ ಹೆಚ್.ಮಂಜೇಶ್, ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಸೇತುರಾಮು, ಲತಾ, ಕಲ್ಲುಕುಟಕರ ಸಂಘದ ಮಹದೇವ್, ನಂದೀಶ್, ಆರ್ಮುಗ, ಸರೋಜ, ಅಂಬಿಕಾ ಇದರು.

## ಆಶ್ರಯ ಮನೆಗೆ ಸಹಕಾರ ನೀಡಿದ ಶಾಸಕರಿಂದಲೇ ಈಗ ವಿರೋಧ

» ಮೊದಲನೇ ಪುಟದಿಂದ

ನೀಡಲಾಗಿದೆ ಎಂದು ದಾಖಲೆಗಳನ್ನು ತೋರಿಸಿದರೂ ಪ್ರಯೋಜನವಾಗಿಲ್ಲ. ಎ.ಟಿ.ರಾಮಸ್ವಾಮಿ ಅವರು ಶಾಸಕರಾಗಿದ್ದಾಗ ನಿವೇಶನ ನೀಡಲಾಗಿತ್ತು. ಆದರೀಗ ನೋಟೀಸ್ ನೀಡದೇ ಕಟ್ಟಡ ನಾಶಪಡಿಸಲಾಗಿದೆ. ಅಲ್ಲಿ ದಲಿತರು, ಅಲ್ಪಸಂಖ್ಯಾತರು, ಒಕ್ಕಲಿಗರು ಹೀಗೆ ಎಲ್ಲಾ ಸಮುದಾಯದವರಿದ್ದಾರೆ. ಅಲ್ಲಿದ್ದ 78 ಎಕರೆ ಗೋಮಾಳದಲ್ಲಿ ಸುಮಾರು 20 ಎಕರೆಯನ್ನು ಬಲಾಢ್ಯರು ಒತ್ತುವರಿ ಮಾಡಿದ್ದಾರೆ. ಅವರನ್ನು ಬಿಟ್ಟು, ಈಗ ಬಡವರ ವಿರುದ್ಧ ಹಗೆತನ ಸಾಧಿಸಲಾಗುತ್ತಿದೆ. 1 ಎಕರೆ 10 ಗುಂಟೆ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದ 10ಕ್ಕೂ ಅಧಿಕ ಕುಟುಂಬಗಳ ವಿರುದ್ಧ ಅಧಿಕಾರಿಗಳು ಗದಾ ಪ್ರಹಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಮನೆ ಕಳೆದುಕೊಂಡ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಬೇಕು. ಅದು ಆಗದಿದ್ದರೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಯಾರಿಗೂ ಅನ್ಯಾಯ ಆಗಬಾರದೆಂದರೆ ಸ್ಥಳೀಯ ಶಾಸಕರು ಕೂಡಲೇ ನಿಷ್ಪಕ್ಷಪಾತ ತನಿಖೆಗೆ ಆದೇಶಿಸಬೇಕು. ಈ ಬೇಡಿಕೆ ಮುಂದಿಟ್ಟು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರ ನೇತೃತ್ವದಲ್ಲಿ ಏ. 8ರಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ನಿವಾಸಿ ಅಕ್ರಂ ಪಾಷ ಅವರು ಮಾತನಾಡಿ, ಸರ್ವೆ ನಂ.94ರಲ್ಲಿ ಹೆಚ್‌ಯುಡಿ 535 ಕೆಹೆಚ್‌ಬಿ 91 ರ ಅನ್ವಯ ಸುಮಾರು 60 ಮಂದಿಗೆ ಹಕ್ಕು ಪತ್ರ ವಿತರಿಸಲಾಗಿತ್ತು. ಇದೀಗ 34 ಮಂದಿ ಬಳಿ ಹಕ್ಕುಪತ್ರ ಇದ್ದು, ಆ ಪೈಕಿ 8-10 ಮಂದಿ ಮನೆ ಕಟ್ಟಿಕೊಂಡಿದ್ದರು. ಆದರೀಗ ಯಾವುದೇ ಸೂಚನೆ ನೀಡದೇ ನೆಲಸಮ ಮಾಡಲಾಗಿದೆ. ಆಡಳಿತ ವೈಫಲ್ಯದಿಂದ ನಮ್ಮ ಬದುಕು ಬೀದಿಗೆ ಬಂದಿದೆ. ನಮಗೆ ಸೂಕ್ತ ಪರಿಹಾರ ಜೊತೆಗೆ ಸ್ವಂತ ಮನೆ ಹೊಂದಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.

ತಾಲ್ಲೂಕು ಆಡಳಿತದ ಅನ್ಯಾಯ ಖಂಡಿಸಿ ಬುಧವಾರ ಅರಕಲಗೂಡಿನ ಅಂಬೇಡ್ಕರ್ ಪ್ರತಿಮೆ ಎದುರು ರೈತ ಸಂಘ ಹಾಗು ಪ್ರಗತಿಪರ ಸಂಘಟನೆಗಳಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುತ್ತಿದ್ದೇವೆಂದರು. ಸುದ್ದಿಗೋಷ್ಠಿಯಲ್ಲಿ ಕಾಂತರಾಜು, ಕೆಡಿಪಿ ಸದಸ್ಯ ಅಹಮದ್‌ಜಾನ್, ಮುಜಾಯಿದ್, ಅಬ್ದುಲ್ ನದೀಫ್ ಇದ್ದರು.

**ಬೂವನಹಳ್ಳಿ ಕೃಷಿ ಪತ್ತಿನ ಸುವರ್ಣ ಮಹೋತ್ಸವದ ಸಂಭ್ರಮ: ಮಾಜಿ ಪದಾಧಿಕಾರಿಗಳಿಗೆ ಗೌರವ ಸಮರ್ಪಣೆ**

# ಸಂಘಗಳ ಅಭಿವೃದ್ಧಿಗೆ ದೂರದೃಷ್ಟಿ ಅಗತ್ಯ : ಸ್ವಾಮಿಗೌಡ

• ಪ್ರಜೋದಯ ವರದಿ

**ಹಾಸನ:** ಸಹಕಾರ ಸಂಘಗಳ ಯಶಸ್ಸಿನ ಹಿಂದೆ ಅನೇಕ ಮಂದಿಯ ಪರಿಶ್ರಮ, ದೂರದೃಷ್ಟಿ ಮತ್ತು ತ್ಯಾಗ ಅಡಗಿದ್ದು, ಇದನ್ನು ಅರ್ಥೈಸಿಕೊಂಡು ಮುನ್ನಡೆದರೆ ಸಂಘಗಳ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿ.ಎ.ಸ್ವಾಮಿಗೌಡ ಅವರು ಅಭಿಪ್ರಾಯಪಟ್ಟರು.

ಬೂವನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲಾ ಆವರಣದಲ್ಲಿ ನಡೆದ ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಸುವರ್ಣ ಮಹೋತ್ಸವದಲ್ಲಿ ಮಾತನಾಡಿದ ಅವರು, ಸಹಕಾರವೆಂದರೆ ಕೇವಲ ಹಣಕಾಸಿನ ವ್ಯವ ಹಾರವಲ್ಲ ಅದು ನಂಬಿಕೆ, ಐಕ್ಯತೆ ಮತ್ತು ಪರಸ್ಪರ ಸಹಾಯದ ಸಂಕೇತವಾಗಿದ್ದು, ಈ ಮೌಲ್ಯಗಳನ್ನು ಸಂಘವು ಕಳೆದ ಐವತ್ತು ವರ್ಷಗಳಿಂದ ಯಶಸ್ವಿಯಾಗಿ ಕಾಪಾಡಿಕೊಂಡು ಬಂದಿದೆ ಎಂದು ಹೇಳಿದರು.

ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘವು ಐದು ದಶಕಗಳಲ್ಲಿ ಹಲವು ಏಳು-ಬೀಳು ಕಂಡಿದ್ದು, ಒಂದು ಸಂದರ್ಭದಲ್ಲಿ ಮುಚ್ಚುವ ಹಂತಕ್ಕೇ ತಲುಪಿತ್ತು. ಆದರೆ ನಂತರ ಆರ್ಥಿಕ ಚೇತರಿಕೆ ಕಂಡು ಇಂದು ಹತ್ತಾರು ಕೋಟಿ ರೂ. ವಹಿವಾಟು ನಡೆಸುವ ಮಟ್ಟಕ್ಕೆ ಬೆಳೆದಿರುವುದು



ಶ್ಲಾಘನೀಯವಾಗಿದೆ ಎಂದರು.

ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹನುಮೇಗೌಡ ಅವರು ಮಾತನಾಡಿ, ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಜೀವ ನಾಡಿಯಂತಿದ್ದು, ಬಿತ್ತನೆ ಬೀಜ, ಗೊಬ್ಬರ ಸೇರಿ ಹಲವು ಅಗತ್ಯ ಸೇವೆಗಳು ಸಹಕಾರ ಸಂಘಗಳ ಮೂಲಕ ರೈತರಿಗೆ ಲಭ್ಯವಾಗುತ್ತಿವೆ. ಎಲ್ಲರೂ ಒಗ್ಗೂಡಿ ಸಂಘಗಳನ್ನು ಬೆಳೆಸುವ ಮೂಲಕ ಸಹಕಾರ ತತ್ವ ಬಲಪಡಿಸಬೇಕೆಂದು ತಿಳಿಸಿದರು.

ಹೆಚ್‌ಡಿಸಿಸಿ ಬ್ಯಾಂಕಿನ ನಿರ್ದೇಶಕ ಬಿದರಿಕೆರೆ ಜಯರಾಂ ಅವರು ಮಾತನಾಡಿ, ಸಹಕಾರ ಸಂಘಗಳು ಈ ದೇಶದ ಅಮೂಲ್ಯ ಆಸ್ತಿಯಾಗಿವೆ. ಗ್ರಾಮೀಣ ಭಾಗಗಳಲ್ಲಿ ಸಾವಿರಾರು ಕೋಟಿ ವಹಿವಾಟು ಸಹಕಾರ ಸಂಘಗಳ ಮೂಲಕ ನಡೆಯುತ್ತಿದ್ದು, ದೇಶದ ಆರ್ಥಿಕ ವ್ಯವಸ್ಥೆಗೆ ಮಹತ್ವದ ಕೊಡುಗೆ ನೀಡುತ್ತಿವೆ ಎಂದು ಹೇಳಿದರು.

ಈ ವೇಳೆ ಸಂಘದ ಹಿಂದಿನ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಜೊತೆಗೆ 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಗಳಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಗಳಿಸಿದ ಸಂಘದ ವ್ಯಾಪ್ತಿಯ ಗ್ರಾಮಗಳ 50ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ನಾಡಿನ ಹೆಸರಾಂತ ಕಲಾವಿದರು ಸುವರ್ಣ ಸಂಗೀತ ಲಹರಿ ಕಾರ್ಯಕ್ರಮ ನಡೆಸಿಕೊಟ್ಟರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ದಿನೇಶ್, ಜಯರಾಂ, ಎಪಿಎಂಸಿ ಸದಸ್ಯ ಕಮಲ ನೀಲಪ್ಪ, ಸಂಘದ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮುಖಂಡರಾದ ಹರೀಶ್, ಲಕ್ಷ್ಮಣ್, ಹೆಚ್‌ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಕುಮಾರ್, ಗಿರೀಶ್ ಸೇರಿ ಸಂಘದ ಮಾಜಿ ಅಧ್ಯಕ್ಷರಾದ ಬಿ.ಡಿ. ಕರಿಯಯ್ಯ, ಮಲ್ಲೇಶ್, ನಂಜಪ್ಪ, ಪುಟ್ಟಸ್ವಾಮಿ, ರಂಗೇಗೌಡ, ಮಾಜಿ ಉಪಾಧ್ಯಕ್ಷ ವೀರಣ್ಣಗೌಡ ಹಾಗೂ ಹಾಲಿ ಸದಸ್ಯರಾದ ಚರಣ್, ದುರ್ಗಾ ಪ್ರಸಾದ್, ರವಿಕುಮಾರ್ ಸೇರಿ ಗಣ್ಯರು, ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

### ಸಂಘಗಳ ಅಭಿವೃದ್ಧಿಯಲ್ಲಿ ಸ್ಥಳೀಯರ ಪಾತ್ರ ಮಹತ್ವದ್ದಾಗಿದೆ

ಸಂಘದ ಅಧ್ಯಕ್ಷ ಬಿ.ಆರ್.ಬೊಮ್ಮೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ 50 ವರ್ಷ ಪೂರೈಸಿರುವುದು ಹೆಮ್ಮೆಯ ವಿಷಯ. ಸಂಘವು ಇಂದು ಕೋಟ್ಯಾಂತರ ರೂ. ವಹಿವಾಟು ನಡೆಸುತ್ತಾ ಸದಸ್ಯರು ಹಾಗೂ ಗ್ರಾಹಕರ ವಿಶ್ವಾಸ ಗಳಿಸಿದೆ ಎಂದು ಹೇಳಿದರು.

ಸಂಘಗಳ ಅಭಿವೃದ್ಧಿಯಲ್ಲಿ ಸ್ಥಳೀಯರ ಪಾತ್ರ ಮಹತ್ವದ್ದಾಗಿದ್ದು, ಎಲ್ಲರೂ ಸಂಘದಲ್ಲಿ ವ್ಯವಹರಿಸುವ ಮನೋಭಾವ ಬೆಳೆಸಿಕೊಂಡರೆ ಅಭಿವೃದ್ಧಿ ಇನ್ನಷ್ಟು ಸಾಧ್ಯವಾಗುತ್ತದೆಂದು ಅಭಿಪ್ರಾಯಪಟ್ಟರು.

ಸುವರ್ಣ ಮಹೋತ್ಸವದ ಸಾಧನೆ ಹಿಂದೆ ಸಂಸ್ಥಾಪಕ ಅಧ್ಯಕ್ಷರಿಂದ ಆರಂಭವಾಗಿ ವಿವಿಧ ಅವಧಿಗಳಲ್ಲಿ ಆಡಳಿತ ನಡೆಸಿದ ಆಡಳಿತ ಮಂಡಳಿಗಳ ದೂರದೃಷ್ಟಿಯೇ ಇಂತಹ ಮಹತ್ವದ ಸಂದರ್ಭ ತಂದಿದೆ. ಇದಲ್ಲದೆ, ಸಹಕಾರ ಸಂಘಗಳು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದ್ದು, ರೈತರ ಸಂಕಷ್ಟಗಳಿಗೆ ತಕ್ಷಣ ಸ್ಪಂದಿಸುವ ಶಕ್ತಿ ಹೊಂದಿವೆ. ಸಂಘಗಳ ಅಭಿವೃದ್ಧಿಗೆ ಯುವಜನತೆ ಸಹ ಸಕ್ರಿಯವಾಗಿ ಭಾಗವಹಿಸಬೇಕೆಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK